# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ/231/2019/ಎ.ಆರ್.ಇ-10

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 30/10/2021.

## ವಿಚಾರಣಾ ವರದಿ

**ಉಪಸ್ಥಿತರು:** ಜಿ. ನಂಜುಂಡಯ್ಯ,
ಅಪರ ನಿಬಂಧಕರು ವಿಚಾರಣೆಗಳು-10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:** ಆಪಾದಿತ ಸರ್ಕಾರಿ ನೌಕರ ಶ್ರೀ **ಶಿವಕುಮಾರ್,** ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಪಸೂರು ಗ್ರಾಮ ಪಂಚಾಯತಿ, ಯಾದಗಿರಿ ಜಿಲ್ಲೆ, ಹಾಲಿ ಪ್ರಾಂಶುಪಾಲರು, ಕಿತ್ತೂರು ರಾಣಿ ಚೆನ್ನಮ್ಮ ಮೊರಾರ್ಜಿ ದೇಸಾಯಿ ಶಾಲೆ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ ರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ:
1. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ-8630/2011/ಡಿಆರ್‌ಇ-3 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 02/04/2016.
2. ಸರ್ಕಾರದ ಆದೇಶ ಸಂಖ್ಯೆ: ಸಕಇ 111 ಮೊದೇಶಾ 2017, ಬೆಂಗಳೂರು, ದಿನಾಂಕ: 12/06/2017.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ/231/2019, ಬೆಂಗಳೂರು ದಿನಾಂಕ: 25/09/2019.

* * * *

ಈ ದೂರನ್ನು, ದೂರುದಾರರಾದ ಶ್ರೀ ವೀರಭದ್ರಪ್ಪ ಬಿನ್ ಹುಸೇನಪ್ಪ, ಮಗದಂಪೂರ, ತಾತಳಗೇರಾ ಅಂಚೆ, ಯಾದಗಿರಿ ತಾಲ್ಲೂಕು ಮತ್ತು ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರ ಶ್ರೀ **ಶಿವಕುಮಾರ್,** ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಪಸೂರು ಗ್ರಾಮ ಪಂಚಾಯತಿ, ಯಾದಗಿರಿ ಜಿಲ್ಲೆ, ಹಾಲಿ ಪ್ರಾಂಶುಪಾಲರು, ಕಿತ್ತೂರು ರಾಣಿ ಚೆನ್ನಮ್ಮ ಮೊರಾರ್ಜಿ ದೇಸಾಯಿ ಶಾಲೆ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆರವರ ವಿರುದ್ಧ ದೂರು ಸಲ್ಲಿಸಿ ಆಪಾದಿತ ಸರ್ಕಾರಿ ನೌಕರರು ಇಂದಿರಾ-ಬಸವ

ವಸತಿ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಪಕ್ರಿಯೆಯಲ್ಲಿ ಅವ್ಯವಹಾರಗಳನ್ನು ಎಸಗಿ ಕರ್ತವ್ಯಲೋಪವೆಸಗಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ: 12/06/2017 ರಂದು, ಮಾನ್ಯ ಉಪಲೋಕಾಯುಕ್ತರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ಸರ್ಕಾರಿ ಆದೇಶವನ್ನು ನೀಡಿರುವ ಮೇರೆಗೆ, ಮಾನ್ಯ ಉಪಲೋಕಾಯುಕ್ತರವರು ದಿನಾಂಕ: 25/09/2019 ರಂದು ಅಪರ ನಿಬಂಧಕರು, ವಿಚಾರಣೆಗಳು–10 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸಲು ಆದೇಶಿಸಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ರವರ ವಿರುದ್ಧ ದೋಷಾರೋಪಣೆ (Article of Charge) ಅನ್ನು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ–1 ಮತ್ತು ಅನುಬಂಧ–2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 20/11/2019 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

***ಅನುಬಂಧ–1***

***ದೋಷಾರೋಪಣೆ–1***

2. ಆಪಾದಿತ ಸರ್ಕಾರಿ ನೌಕರರಾದ ಶ್ರೀ. **ಶಿವಕುಮಾರ್**, ಆದ ನೀವು ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಪಸ್ಪೂಲ್ ಗ್ರಾಮ ಪಂಚಾಯತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ನಿಮ್ಮ ಸೇವಾ ಅವಧಿಯಲ್ಲಿ ಇಂದಿರಾ–ಬಸವ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ಈ ಕೆಳಗೆ ನಮೂದಿಸಿದಂತೆ ಅವ್ಯವಹಾರಗಳನ್ನು ಎಸಗಿ ಕರ್ತವ್ಯಲೋಪ ಎಸಗಿರುತ್ತೀರಿ, ಅವುಗಳ ವಿವರ ಈ ಕೆಳಕಂಡಂತೆ ಇರುತ್ತದೆ.

(i) ಯಾದಗಿರಿ ತಾಲ್ಲೂಕಿನ ಪಸ್ಪೂಲ್ ಗ್ರಾಮಪಂಚಾಯ್ತಿಯಲ್ಲಿ 2010–11ನೇ ಸಾಲಿನ ಬಸವ ಇಂದಿರಾ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಅನುಸರಿಸಲಾದ ಕ್ರಮಗಳ ಬಗ್ಗೆ ಯಾವುದೇ ದಾಖಲಾತಿಗಳು ಗ್ರಾಮಪಂಚಾಯ್ತಿ ಕಛೇರಿಯಲ್ಲಿ ಲಭ್ಯವಿಲ್ಲ. ವಸತಿಯೋಜನೆಯ ಅನುಷ್ಠಾನದ ಬಗ್ಗೆ ನೀಡಲಾಗಿರುವ ಮಾರ್ಗಸೂಚಿಯು ಪ್ರಕಾರ ಅರ್ಜಿದಾರ ಫಲಾನುಭವಿಗಳ ಪಟ್ಟಿಯನ್ನು ಗ್ರಾಮ ಸಭೆಯಲ್ಲಿ ಮಂಡಿಸಿ, ಗ್ರಾಮಸ್ತರು ಹಾಗೂ ಗ್ರಾಮ ಪಂಚಾಯಿತಿಯ ಸದಸ್ಯರುಗಳು ಒಪ್ಪಿಗೆ ನೀಡಿದ ನಂತರ, ಗ್ರಾಮಪಂಚಾಯ್ತಿಯ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಠರಾವು ಹೊರಡಿಸಿದ ನಂತರವೇ ಸದರಿ ಫಲಾನುಭವಿಗಳ ಪಟ್ಟಿಯನ್ನು ಅನುಮೋದನೆಗಾಗಿ ಮಂಡಿಸುವ ಬಗ್ಗೆ ಮಾರ್ಗಸೂಚಿ ಇರುತ್ತದೆ. ದಿನಾಂಕ: 26/03/2011 ರಂದು ನಡೆದ ಸಾಮಾನ್ಯ ಸಭೆಯ ಪ್ರೊಸಿಡಿಂಗ್ಸ್ ಪುಸ್ತಕದಲ್ಲಿ, 63 ಫಲಾನುಭವಿಗಳ ಹೆಸರುಗಳನ್ನು ನಮೂದಿಸಿ, ಅವರನ್ನು ಫಲಾನುಭವಿಗಳು ಎಂದು ಆಯ್ಕೆ ಮಾಡಿ ಸಭೆಯಲ್ಲಿ ಮಂಡಿಸಿ ದೃಢೀಕರಿಸಲಾಗಿದೆ. ಆದರೆ, ಸದರಿ ನಡವಳಿ ಪುಸ್ತಕದಲ್ಲಿ ಸಭೆಗೆ ಹಾಜರಾದ ಗ್ರಾಮಸ್ಥರ ಹಾಗೂ ಸದಸ್ಯರ ಸಹಿಯಾಗಲೀ ಸಾಮಾನ್ಯ ಸಭೆಯ ಠರಾವು ಆಗಲೀ ಲಭ್ಯವಿಲ್ಲ ಹಾಗೂ ಅರ್ಹ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಲ್ಲಿ ಯಾವ ರೀತಿಯ ಕ್ರಮ ಅನುಸರಿಸಲಾಗಿದೆ, ಹಾಗೂ ಮಾರ್ಗಸೂಚಿ ಅನ್ವಯ ಅಯ್ಕೆ ಮಾಡಲಾಗಿದೇ ಎಂಬ ಬಗ್ಗೆ ಯಾವುದೇ ದಾಖಲೆಗಳು ಲಭ್ಯವಿಲ್ಲ. ಅರ್ಹ ಫಲಾನುಭವಿಗಳನ್ನು ಗುರುತಿಸಿ, ಆಯ್ಕೆ ಮಾಡಿರುವ ಬಗ್ಗೆ ಯಾವುದೇ ದಾಖಲೆಗಳು ಇಲ್ಲದೆ ಹಾಗೂ ಸರ್ಕಾರದ ನಿಯಮಗಳನ್ನು ಹಾಗೂ ಯೋಜನೆಯ ಮಾರ್ಗಸೂಚಿಯನ್ನು ಉಲ್ಲಂಘಿಸಿ ಸದರಿ ಫಲಾನುಭವಿಗಳ ಪಟ್ಟಿಯನ್ನು ತಯಾರಿಸಿ ಅನುಮೋದನೆಗಾಗಿ ಮೇಲಾಧಿಕಾರಿಗಳಿಗೆ ಸಲ್ಲಿಸಿದ್ದು, ಅಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಮಾರ್ಗಸೂಚಿಯನ್ನು ಅನುಸರಿಸದೆ ಕರ್ತವ್ಯ ಲೋಪ ಎಸಗಿರುತ್ತೀರಿ.

(ii) ಹಾಗೂ ಆಪಾದಿತ ಸರ್ಕಾರಿ ನೌಕರರಾದ ನೀವು 2011-12 ನೇ ಸಾಲಿನಲ್ಲಿ ದಿನಾಂಕ: 05/04/2011 ರಿಂದ 07/07/2011 ರವರೆಗೆ ಕರ ವಸೂಲಿ ಬಾಬ್ತು ರೂ.1,06,000/- ಗಳ ಹಣವನ್ನು ವಸೂಲು ಮಾಡಿದ್ದು, ಸದರಿ ಮೊತ್ತವನ್ನು ದಿನಾಂಕ: 08/07/2011 ರಂದು ಬ್ಯಾಂಕಿನಲ್ಲಿ ಜಮಾ ಮಾಡಬೇಕಾಗಿರುತ್ತದೆ. ಆದರೆ, ನೀವು ದಿನಾಂಕ: 08/07/2011 ರಂದು ಕೇವಲ ರೂ. 49,000/- ಗಳನ್ನು ಮಾತ್ರ ಬ್ಯಾಂಕಿನ ಗ್ರಾಮಪಂಚಾಯ್ತಿಗೆ ಖಾತೆಗೆ ಜಮಾ ಮಾಡಿ, ಉಳಿದ ಮೊತ್ತವನ್ನು ಮುಂದಿನ ದಿನಗಳಲ್ಲಿ ಜಮಾ ಮಾಡಿರುವುದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ನೀವು ಕರ ವಸೂಲಿಯಾದ ಇನ್ನುಳಿದ ಮೊತ್ತವಾದ ರೂ. 51,600/- ಗಳನ್ನು ಬ್ಯಾಂಕಿನ ಖಾತೆಗೆ ಜಮಾ ಮಾಡದೇ ನಿಮ್ಮ ಬಳಿಯೇ ಉಳಿಸಿಕೊಂಡು, ತಾತ್ಕಲಿಕ ದುರುಪಯೋಗಪಡಿಸಿಕೊಂಡಿರುತ್ತೀರಿ ಹಾಗೂ ಸರ್ಕಾರಿ ಕೆಲಸ ನಿರ್ವಹಿಸುವಲ್ಲಿ, ಕರ್ತವ್ಯಲೋಪ ಎಸಗಿರುತ್ತೀರಿ ಹಾಗೂ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 ರ ನಿಯಮ 3 (i) ರಿಂದ (iii) ರಲ್ಲಿ ಹೇಳಿರುವಂತೆ ದುರ್ನಡತೆಯೆಸಗಿರುತ್ತೀರಿ"

## ಅನುಬಂಧ-2

## ದೋಷಾರೋಪಣೆಯ ವಿವರ

**(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)**

3. ಶ್ರೀ. ವೀರಭದ್ರಪ್ಪ ಬಿನ್ ಹುಸೇನಪ್ಪ ಮಲಿಪಲ್ಲಿ, ಮಗದಂಪೂರ, ತಾತಳಗೇರಾ ಅಂಚೆ, ಯಾದಿಗಿರಿ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು (1)ಶ್ರೀಮತಿ. ತಾಯಮ್ಮ, ಪಸ್ಪೂಲ್ ಗ್ರಾಮ ಪಂಚಾಯತಿ, ಯಾದಗಿರಿ ತಾಲ್ಲೂಕು ಮತ್ತು ಜಿಲ್ಲೆ, (2) ಶ್ರೀ. ಶಿವಕುಮಾರ್, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಪಸ್ಪೂಲ್ ಗ್ರಾಮ ಪಂಚಾಯತಿ, ಹಾಲಿ ಪ್ರಾಂಶುಪಾಲರು, ಕಿತ್ತೂರು ರಾಣಿ ಚೆನ್ನಮ್ಮ ಮೊರಾರ್ಜಿ ಶಾಲೆ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ ಮತ್ತು 3) ಶ್ರೀ. ವೀರಭದ್ರಪ್ಪ ಗಡದ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ಯಾದಗಿರಿ (ಇನ್ನು ಮುಂದೆ ಕ್ರಮವಾಗಿ 'ಎದುರುದಾರ-1, 2 ಮತ್ತು 3' ಎಂದು ಕರೆಯಲ್ಪಡುತ್ತಾರೆ)

ರವರುಗಳ ವಿರುದ್ಧ ನೀಡಿದ್ದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9 ರಡಿ ತನಿಖೆಗೆ ಸ್ವೀಕರಿಸಿ, ಮುಂದಿನ ಕ್ರಮ ಜರುಗಿಸಲಾಗಿರುತ್ತದೆ.

4) ದೂರುದಾರರು ಸಲ್ಲಿಸಿರುವ ದೂರಿನ ಸಾರಾಂಶವೇನೆಂದರೆ;

(ಅ) ಯಾದಗಿರಿ ತಾಲ್ಲೂಕಿನ ಪಸ್ಪೂಲ್ ಗ್ರಾಮ ಪಂಚಾಯ್ತಿಯಲ್ಲಿ 2010-11 ಮತ್ತು 2011-12 ನೇ ಸಾಲಿನ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೆಲಸ ಮಾಡದೇ ಬೋಗಸ್ ಬಿಲ್ ಮಾಡಲಾಗಿದೆ ಎಂದು, 2011-12ನೇ ಸಾಲಿನ ಕರ ವಸೂಲಿ ಹಣವನ್ನು ದುರುಪಯೋಗ ಪಡಿಸಿಕೊಳ್ಳಲಾಗಿದೆ ಮತ್ತು ಬಸವ ಇಂದಿರಾ ವಸತಿ ಯೋಜನೆಯಡಿಯಲ್ಲಿ ಮನೆಗಳ ವಿತರಣೆಯಲ್ಲಿ ಅವ್ಯವಹಾರವಾಗಿರುತ್ತದೆ.

(ಆ) 2010-11ನೇ ಸಾಲಿನ ಬಸವ ಇಂದಿರಾ ಯೋಜನೆಯಡಿಯಲ್ಲಿ ಅರ್ಹ ಫಲಾನುಭವಿಗಳ ಅನುಮೋದಿತ ಪಟ್ಟಿಯಲ್ಲಿ ಮನೆಗಳನ್ನು ಮಂಜೂರು ಮಾಡುವಲ್ಲಿ ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಶ್ರೀಮತಿ ತಾಯಮ್ಮ ಗಂಡ ಶ್ರೀ ಮರೆಪ್ಪ ದೊಡ್ಡಪನೋರ್ ಮಗದಪೂರು ಇವರ, ಕುಟುಂಬದ ಸದಸ್ಯರಿಗೆ 4 ಮನೆಗಳನ್ನು ವಿತರಿಸಲಾಗಿದೆ ಎಂದು ಆಪಾದಿಸಿರುತ್ತಾರೆ.

(ಇ) ಕ್ರಮ ಸಂಖ್ಯೆ: 2 ಶ್ರೀಮತಿ ಲಕ್ಷ್ಮಮ್ಮ ನಾಗಪ್ಪ (ತಾಯಿ), ಕ್ರಮ ಸಂಖ್ಯೆ: 3 ಶ್ರೀಮತಿ ನಾಗಮ್ಮ ಭೀಮರಾಯ (ಚಿಕ್ಕಮ್ಮ), ಕ್ರಮ ಸಂಖ್ಯೆ: 35, ಶ್ರೀಮತಿ ಶಾಂತಮ್ಮ ದೇವೀಂದ್ರಪ್ಪ (ನೆಗಣಿ) ಕ್ರಮ ಸಂಖ್ಯೆ: 39, ಶ್ರೀಮತಿ ದೊಡ್ಡಮ್ಮ (ದೊಡ್ಡಪ್ಪ) ನಾಗಪ್ಪ (ತಮ್ಮ) ಇವರುಗಳು ಮನೆಗಳನ್ನು ಪಡೆದಿರುವುದಾಗಿ ಆಪಾದಿಸಲಾಗಿದೆ.

(ಈ) ತಾಲ್ಲೂಕು ಪಂಚಾಯತ್ ಸದಸ್ಯೆಯಾದ ಶ್ರೀಮತಿ ರಾಧ ಗಂಡ ಶ್ರೀ ನಾಗಪ್ಪ ಮಡಿವಾಳ ಇವರ ಕುಟುಂಬದ ಸದಸ್ಯರಾದ ಕ್ರಮ ಸಂಖ್ಯೆ: 32 ಶ್ರೀಮತಿ ರಾಧ ಗಂಡ ಶರೀ ನಾಗಪ್ಪ ಮಡಿವಾಳ (ಸ್ವಂತ), ಕ್ರಮ ಸಂಖ್ಯೆ: 22, ಶ್ರೀಮತಿ

ಮಲ್ಲಮ್ಮ ಮರೆಪ್ಪ ಮಡಿವಾಳ (ನೆಗಣಿ) ಇವರು ಎರಡು ಮನೆಗಳನ್ನು ಪಡೆದುಕೊಂಡಿರುವುದಾಗಿ ಆಪಾದಿಸಲಾಗಿದೆ.

(ಉ) ಕ್ರಮ ಸಂಖ್ಯೆ: 37, ಶ್ರೀಮತಿ ತಿಪ್ಪಮ್ಮ ಗಂಡ ಶ್ರೀ ಬಾಲಪ್ಪ ಇವರು ದೂರದ ತಾತಳಗೇರಾ ಗ್ರಾಮದ ನಿವಾಸಿಯಾಗಿದ್ದು, ಇವರಿಗೂ ಕೂಡ ಹಣ ತೆಗೆದುಕೊಂಡು ಮನೆ ಮಂಜೂರು ಮಾಡಿರುತ್ತಾರೆ.

(ಊ) ಇದಲ್ಲದೆ ಶ್ರೀಮತಿ ತಾಯಮ್ಮ ಗಂಡ ಶ್ರೀ ಮಾರೆಪ್ಪ (ದೊಡ್ಡಪ್ಪ) ಇವರು ಗ್ರಾಮ ಪಂಚಾಯ್ತಿ ಅಧ್ಯಕ್ಷೆಯಾಗಿದ್ದು, ಇವರಿಗೆ ಸ್ವಂತ ಮನೆ ಇದ್ದರೂ ಕೂಡ, 4 ಮನೆ ಮಂಜೂರು ಮಾಡಿಕೊಂಡಿರುತ್ತಾರೆ ಎಂದು ದೂರಿನಲ್ಲಿ ವಿವರಿಸಲಾಗಿದೆ.

5) ದೂರಿನ ಆಪಾದನೆ ಪರಿಗಣಿಸಿ, ದೂರಿನ ಪ್ರತಿಯನ್ನು ಅಡಕಗಳೊಂದಿಗೆ ಎದುರುದಾರರಿಗೆ ಕಳುಹಿಸಿ, ಆಕ್ಷೇಪಣೆಯನ್ನು ಸಲ್ಲಿಸುವಂತೆ ಸೂಚಿಸಲಾಯಿತು. 1ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ ಬಸವ ಇಂದಿರಾ ವಸತಿ ಯೋಜನೆಯ ಕ್ರಮ ಸಂಖ್ಯೆ: 2, 3 ಮತ್ತು 35ರ ಕಟುಂಬಗಳು ಬೇರೆ ಇವೆ, ತಮ್ಮ ಕುಟುಂಬಕ್ಕೆ ಯಾವುದೇ ಸಂಬಂಧ ಇಲ್ಲ ಹಾಗೂ ಕ್ರಮ ಸಂಖ್ಯೆ: 39ರಲ್ಲಿ ಹೆಸರು ತಪ್ಪು ಇದೆ. ದಿನಾಂಕ: 19/04/2011 ರಂದು ಮಾನ್ಯ ಶಾಸಕರು ಗ್ರಾಮವಾರು ಸಮೀಕ್ಷೆ ನಡೆಸಿ ಗ್ರಾಮ ಸಭೆಗಳಲ್ಲಿ ಆಯ್ಕೆ ಮಾಡಲಾಗಿದ್ದು ಫಲಾನುಭವಿಗಳನ್ನು ವಿಧಾನಸಭೆ ಜಾಗ್ರತಿ ಸಮಿತಿಯಲ್ಲಿ ನಡೆದ ಸಭೆಯಲ್ಲಿ ಲಾಟರಿ ಮೂಲಕ ಆಯಾ ಆಯಾ ಗ್ರಾಮದ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಗ್ರಾಮಗಳಲ್ಲಿ ಇರುವ ಅರ್ಹ ಗುಡಿಸಲು ವಾಸಿಗಳನ್ನ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಠರಾವು ಹೊರಡಿಸಿ ದಾಖಲೀಕರಣ ಪ್ರಕ್ರಿಯೇ ಪೂರ್ಣಗೊಳಿಸುವುದು ಪಂಚಾಯಿತಿಯ ಕೆಲಸ ಆಗಿರುತ್ತದೆ. ಉದ್ಯೋಗ ಖಾತ್ರಿ ಯೋಜನೆಯ ಕಾಮಗರಿಗಳನ್ನು ಸಂಬಂಧಪಟ್ಟ ಅನುಷ್ಠಾನ ಇಲಾಖೆಯ ಅಧಿಕಾರಿಗಳು ಪರಿಶೀಲನೆ ಮಾಡಿ 3ನೇ ತನಿಖಾ ತಂಡದ ಪರಿಶೀಲನೆ ವರದಿ ಸಲ್ಲಿಸಿದ ನಂತರ ಬಿಲ್ಲಗಳನ್ನು ಕೂಲಿಕಾರ್ಮಿಕರಿಗೆ ಪಾವತಿಸಲಾಗಿದೆ ಯಾವುದೇ ಅವ್ಯವಹಾರ ನಡೆದಿಲ್ಲ ಎಂದು ದೂರನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

6) 2ನೇ ಎದುರುದಾರರಾದ ಶ್ರೀ ಶಿವಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ತಮ್ಮ ಆಕ್ಷೇಪಣೆಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಬಿಲ್ಲುಗಳನ್ನು 3ನೇ ತನಿಖಾ ತಂಡ ಪರಿಶೀಲಿಸಿದ ನಂತರವೇ ಚೆಕ್ ಮುಖಾಂತರ ಹಣ ಪಾವತಿಸಲಾಗಿದೆ, ಕರ ವಸೂಲಿ ಹಣವನ್ನು ಬ್ಯಾಂಕ್‌ಗೆ ಜಮಾ ಮಾಡಲಾಗಿದೆ, ಕರ ವಸೂಲಿಯಲ್ಲಿ ಯಾವುದೇ ತರಹದ ಲೋಪದೋಷ ಇರುವುದಿಲ್ಲ, ಬಸವ ಇಂದಿರಾ ವಸತಿ ಯೋಜನೆಯಲ್ಲಿ ಮನೆಗಳನ್ನ ಉಪಾಧ್ಯಕ್ಷರ ಕುಟುಂಬದವರಿಗೆ ಮಂಜೂರು ಮಾಡಲಾಗಿದೆ ಎಂಬ ಆರೋಪ ನಿರಾಧಾರವಾಗಿದೆ. ತಾಲ್ಲೂಕು ಪಂಚಾಯಿತಿ ಸದಸ್ಯರಾದ ಶ್ರೀಮತಿ ರಾಧ ಮತ್ತು ಕ್ರಮ ಸಂಖ್ಯೆ: 37ರಲ್ಲಿ ಇರುವ ತಿಪ್ಪಮ್ಮ ಗಂಡ ಬಾಲಪ್ಪ ಇವರುಗಳು ದಾಖಲೆಗಳನ್ನು ಪೂರೈಸಲಾರದ ಕಾರಣ ನಿವೇಶನ ನೋಂದಣಿ ಆಗಿರುವುದಿಲ್ಲ, ಆದಕಾರಣ ದೂರುದಾರರು ಸದರಿ ದೂರನ್ನು ವೈಯುಕ್ತಿಕ ಕಾರಣಗಳಿಂದ ದಾಖಲಿಸಿದ್ದು ನಿರಾಧಾರವಾಗಿರುತ್ತದೆ ಎಂದು ಹೇಳಿ ದೂರನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ.

7) ಆನಂತರ ಸದರಿ ದೂರಿನ ತನಿಖೆ ಕೈಗೊಳ್ಳಲು ಈ ಸಂಸ್ಥೆಯ ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ವಹಿಸಿದ್ದು ಸದರಿಯವರು ದೂರಿನ ತನಿಖೆ ಕೈಗೊಳ್ಳಲು ತನಿಖಾಧಿಕಾರಿಗಳಾದ ಶ್ರೀ ಗಣೇಶ್ ರಾವ್, ಸಹಾಯಕ ಅಭಿಯಂತರರು ಇವರಿಗೆ ವಹಿಸಿದ್ದು, ತನಿಖಾಧಿಕಾರಿಗಳು ದಿನಾಂಕ: 10/12/2013 ರಂದು ಸ್ಥಳ ಪರಿಶೀಲನೆ ನಡೆಸಿ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ.

8) ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ, 2010-11ನೇ ಸಾಲಿನ ಬಸವ ಇಂದಿರಾ ವಸತಿ ಯೋಜನೆಯಡಿಯಲ್ಲಿ 63 ಫಲಾನುಭವಿಗಳ ಪಟ್ಟಿಯನ್ನ ಪರಿಶೀಲಿಸಿದಾಗ ಪಸ್ಪೂಲ್ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿ ಮತ್ತು ಪಸ್ಪೂಲ್ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಯೋಜನೆ ನಿಯಮದಂತೆ ಗ್ರಾಮವಾರು ಸಮೀಕ್ಷೆ ನಡೆಸಿ ಗ್ರಾಮ ಸಭೆಗಳಲ್ಲಿ ಆಯ್ಕೆ ಮಾಡಿ ಎಲ್ಲಾ ಫಲಾನುಭವಿಗಳು ಗುಡಿಸಲಿನಲ್ಲಿ ವಾಸ ಮಾಡುತ್ತಿರುತ್ತಾರೆಂದು ದೃಢೀಕರಿಸಿರುತ್ತಾರೆ. ಫಲಾನುಭವಿಗಳ ಪಟ್ಟಿಯನ್ನು ಗ್ರಾಮ ಸಭೆಯಲ್ಲಿ ಮಂಡಿಸಿ ತದನಂತರ ಗ್ರಾಮಸ್ತರು ಹಾಗೂ ಗ್ರಾಮ ಪಂಚಾಯಿತಿಯ ಸದಸ್ಯರುಗಳು ಒಪ್ಪಿಗೆ ನೀಡಿದ ನಂತರ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಠರಾವು ಹೊರಡಿಸಿದ ಮೇಲೆ ಸದರಿ ಫಲಾನುಭವಿಗಳ ಪಟ್ಟಿಯನ್ನು ಅನುಮೋದನೆಗಾಗಿ ಮಂಡಿಸುವ ಕ್ರಮವು ಇರುತ್ತದೆ. ದಿನಾಂಕ: 26/03/2011 ರಂದು ಸಾಮಾನ್ಯ ಸಭೆಯ

ಪ್ರೊಸಿಡಿಂಗ್ಸ್ ಪುಸ್ತಕದಲ್ಲಿ 63 ಫಲಾನುಭವಿಗಳು ಇದ್ದು, ಈ ಬಗ್ಗೆ ಶಾಸಕರಿಂದ ಪಡೆಯಲಾದ ಪತ್ರವನ್ನು ಸಭೆಯಲ್ಲಿ ಮಂಡಿಸಿ ದೃಢೀಕರಿಸಲಾಗಿದೆಯೆಂದು ನಮೂದಿಸಿರುವುದು ಕಂಡುಬರುತ್ತದೆ. ಸದರಿ ಸಭೆಗೆ ಹಾಜರಾದವರ ಸಹಿಯಾಗಲೀ ಸಾಮಾನ್ಯ ಸಭೆಯ ಠರಾವು ಆಗಲೀ ಯಾವುದೇ ದಾಖಲೆಗಳು ಇಲ್ಲದೇ ಇರುವುದು ತನಿಖೆಯ ಸಮಯದಲ್ಲಿ ಕಂಡುಬರುತ್ತದೆ ಹಾಗೂ ಅರ್ಹ ಫಲಾನುಭವಿಗಳ ಆಯ್ಕೆ ಪ್ರಕ್ರಿಯೇ ಯಾವ ರೀತಿ ಮಾಡಲಾಗಿದೆ ಎಂದು ದಾಖಲೆಗಳು ಇಲ್ಲದೇ ಇರುವುದು ತನಿಖೆ ಸಮಯದಲ್ಲಿ ಗಮನಿಸಲಾಗಿದೆ, ಅರ್ಹ ಫಲಾನುಭವಿಗಳನ್ನು ಗುರುತಿಸಿರುವ ಯಾವ ದಾಖಲೆಗಳು ಇಲ್ಲದೇ ಹಾಗೂ ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ ಸದರಿ ಫಲಾನುಭವಿಗಳ ಪಟ್ಟಿಯನ್ನು ಅನುಮೋದನೆಗಾಗಿ ಮೇಲಾಧಿಕಾರಿಗಳಿಗೆ ಸಲ್ಲಿಸಲಾಗಿದೆ. ಈ ಸಂಬಂಧ ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶ್ರೀ ಶಿವಕುಮಾರ್, ಪಸ್ಪುಲ್ ಗ್ರಾಮ ಪಂಚಾಯಿತಿ ಇವರು ಮೇಲೆ ವಿವರಿಸಿದ ಪ್ರಕ್ರಿಯೆಯನ್ನು ಮಾಡದೇ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

9) ಅಲ್ಲದೇ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ವೀರಭದ್ರಪ್ಪ ಗಡದರವರೂ ಸಹಾ ಫಲಾನುಭವಿಗಳ ಪಟ್ಟಿಯನ್ನು ಸಂಬಂಧಪಟ್ಟ ದಾಖಲಾತಿಗಳನ್ನ ದೃಢೀಕರಿಸಿದ ನಂತರವಷ್ಟೇ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸಲ್ಲಿಸಬೇಕಾಗಿದ್ದು ಇದರ ಬದಲಾಗಿ ಸದರಿಯವರು ದಾಖಲಾತಿಗಳನ್ನು ಪರಿಶೀಲಿಸದೇ ದೃಢೀಕರಿಸಿ ಮೇಲಾಧಿಕಾರಿಗಳಿಗೆ ಸಲ್ಲಿಸಿ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ ಎಂದು ವರದಿ ನೀಡಿರುತ್ತಾರೆ.

10) ಮುಂದುವರೆದು, ಕರ ವಸೂಲಿ ಹಣ ದುರುಪಯೋಗವಾಗಿದೆ ಎಂಬ ದೂರಿಗೆ ಸಂಬಂಧಿಸಿದಂತೆ ಪಸ್ಪೂಲ್ ಗ್ರಾಮ ಪಂಚಾಯಿತಿಯ ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು 2011-12ನೇ ಸಾಲಿನಲ್ಲಿ ದಿನಾಂಕ: 05/04/2011 ರಿಂದ 07/07/2011 ರವರೆಗೆ ಕರ ವಸೂಲಿಯಾದ ರೂ.1,06,000/- ಗಳ ಹಣವನ್ನು ಸ್ವೀಕರಿಸಿದ್ದು, ಸದರಿ ಮೊತ್ತವನ್ನು ದಿನಾಂಕ: 08/07/2011 ರಂದು ಬ್ಯಾಂಕಿನಲ್ಲಿ ಜಮಾ ಮಾಡಬೇಕಾಗಿರುತ್ತದೆ. ಆದರೆ, ಕಾರ್ಯದರ್ಶಿಯವರು ದಿನಾಂಕ: 08/07/2011 ರಂದು ರೂ. 49,000/- ಗಳನ್ನು ಮಾತ್ರ ಬ್ಯಾಂಕಿನಲ್ಲಿ ಜಮಾ ಮಾಡಿ, ಇನ್ನುಳಿದ ಮೊತ್ತವನ್ನು ಮುಂದಿನ ದಿನಗಳಲ್ಲಿ ಜಮಾ ಮಾಡಿರುವುದು ದಾಖಲೆಗಳಿಂದ ಕಂಡುಬಂದಿರುತ್ತದೆ. ಶ್ರೀ ಶಿವಕುಮಾರ್, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಕರ ವಸೂಲಿಯಾದ ಇನ್ನುಳಿದ ಮೊತ್ತವಾದ ರೂ. 51,600/- ಗಳನ್ನು ತಮ್ಮ

ಬಳಿಯಲ್ಲಿ ಉಳಿಸಿಕೊಂಡು, ಮುಂದಿನ ದಿನಗಳಲ್ಲಿ ಜಮಾ ಮಾಡುವ ಪ್ರಕ್ರಿಯೆಯಿಂದ ಸದರಿಯವರು ಕರ್ತವ್ಯಲೋಪ ಎಸಗಿರುವುದು ಕಂಡುಬಂದಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ.

11) ನಂತರ ವರದಿಯನ್ನಾಧರಿಸಿ ಶ್ರೀ ವೀರಭದ್ರಪ್ಪ ಗಡಗ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಯಾದಗಿರಿ ಇವರುಗಳನ್ನು 3ನೇ ಎದುರುದಾರರನ್ನಾಗಿ ಸೇರಿಸಿ ತನಿಖಾ ವರದಿಯನ್ನ 2 ಮತ್ತು 3ನೇ ಎದುರುದಾರರಿಗೆ ಕಳುಹಿಸಿ ಅವರಿಂದ ಆಕ್ಷೇಪಣೆಯನ್ನ ಕರೆಯಲಾಗಿರುತ್ತದೆ.

12) 2 ಮತ್ತು 3ನೇ ಎದುರುದಾರರು ತನಿಖಾಧಿಕಾರಿಗಳ ವರದಿಗೆ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಅವರುಗಳ ವಿರುದ್ಧ ವರದಿಯಾಗಿರುವ ಕರ್ತವ್ಯ ಲೋಪಗಳನ್ನ ಅಲ್ಲಗಳೆದಿರುತ್ತಾರೆ. ತನಿಖಾಧಿಕಾರಿಗಳ ವರದಿಯಲ್ಲಿ 2 ಮತ್ತು 3ನೇ ಎದುರುದಾರರ ವಿರುದ್ಧ ಕರ್ತವ್ಯ ಲೋಪ ಮೇಲ್ನೋಟಕ್ಕೆ ಕಂಡುಬಂದಿರುವ ಹಿನ್ನಲೆಯಲ್ಲಿ ಸದರಿ ಎದುರುದಾರರುಗಳ ಆಕ್ಷೇಪಣೆಗಳನ್ನ ಈ ಸಂದರ್ಭದಲ್ಲಿ ಒಪ್ಪಲು ಸಾಧ್ಯವಿರುವುದಿಲ್ಲ.

13) ದೂರಿನಲ್ಲಿ ಇರುವ ಆಪಾದನೆಗಳು, ಎದುರುದಾರರ ಆಕ್ಷೇಪಣೆಗಳು ಹಾಗೂ ತನಿಖಾ ವರದಿಯನ್ನ ಕೂಲಂಕಷವಾಗಿ ಪರಿಶೀಲಿಸಲಾಗಿ 2 ಮತ್ತು 3ನೇ ಎದುರುದಾರರು ಈ ಕೆಳಕಂಡಂತೆ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

- 2010-11ನೇ ಸಾಲಿನ ಬಸವ ಇಂದಿರಾ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಗಳ ಆಯ್ಕೆ ಪಟ್ಟಿಯನ್ನು ಗ್ರಾಮ ಸಭೆಯಲ್ಲಿ ಮಂಡಿಸಿ ತದನಂತರ ಗ್ರಾಮಸ್ತರು ಹಾಗೂ ಗ್ರಾಮ ಪಂಚಾಯಿತಿಯ ಸದಸ್ಯರುಗಳು ಒಪ್ಪಿಗೆ ನೀಡಿದ ನಂತರ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಠರಾವು ಹೊರಡಿಸಿದ ಮೇಲೆ ಸದರಿ ಫಲಾನುಭವಿಗಳ ಪಟ್ಟಿಯನ್ನ ಅನುಮೋದನೆಗಾಗಿ ಮಂಡಿಸುವ ಕ್ರಮವು ಇರುತ್ತದೆ. ದಿನಾಂಕ: 26/03/2011 ರಂದು ಸಾಮಾನ್ಯ ಸಭೆಯ ಪ್ರೊಸಿಡಿಂಗ್ಸ್ ಪುಸ್ತಕದಲ್ಲಿ 63 ಫಲಾನುಭವಿಗಳು ಇದ್ದು, ಈ ಬಗ್ಗೆ ಶಾಸಕರಿಂದ ಪಡೆಯಲಾದ ಪತ್ರವನ್ನು ಸಭೆಯಲ್ಲಿ ಮಂಡಿಸಿ ದೃಢೀಕರಿಸಲಾಗಿದೆಯೆಂದು ನಮೂದಿಸಿರುವುದು ಕಂಡುಬಂದಿದ್ದು ಸದರಿ ಸಭೆಗೆ ಹಾಜರಾದವರ ಸಹಿಯಾಗಲೀ ಸಾಮಾನ್ಯ ಸಭೆಯ

ಠರಾವು ಆಗಲೀ ಯಾವುದೇ ದಾಖಲೆಗಳು ಇಲ್ಲದೇ ಇರುವುದು ತನಿಖೆಯ ಸಮಯದಲ್ಲಿ ಕಂಡುಬರುತ್ತದೆ ಹಾಗೂ ಅರ್ಹ ಫಲಾನುಭವಿಗಳ ಆಯ್ಕೆ ಪ್ರಕ್ರಿಯೇ ಯಾವ ರೀತಿ ಮಾಡಲಾಗಿದೆ ಎಂದು ದಾಖಲೆಗಳು ಇಲ್ಲದೇ ಇರುವುದು ತನಿಖೆ ಸಮಯದಲ್ಲಿ ಗಮನಿಸಲಾಗಿದೆ, ಅರ್ಹ ಫಲಾನುಭವಿಗಳನ್ನು ಗುರುತಿಸಿರುವ ಯಾವ ದಾಖಲೆಗಳು ಇಲ್ಲದೇ ಹಾಗೂ ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ ಸದರಿ ಫಲಾನುಭವಿಗಳ ಪಟ್ಟಿಯನ್ನು ಅನುಮೋದನೆಗಾಗಿ ಮೇಲಾಧಿಕಾರಿಗಳಿಗೆ ಸಲ್ಲಿಸಿ 2ನೇ ಎದುರುದಾರರಾದ-ಶ್ರೀ ಶಿವಕುಮಾರ್, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಪಸ್ಪುಲ್ ಗ್ರಾಮ ಪಂಚಾಯಿತಿ ಇವರು ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

- ಮುಂದುವರೆದು, ಕರ ವಸೂಲಿ ಹಣ ದುರುಪಯೋಗವಾಗಿದೆ ಎಂಬ ದೂರಿಗೆ ಸಂಬಂಧಿಸಿದಂತೆ ಪಸ್ಪೂಲ್ ಗ್ರಾಮ ಪಂಚಾಯಿತಿಯ ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು 2011-12ನೇ ಸಾಲಿನಲ್ಲಿ ದಿನಾಂಕ: 05/04/2011 ರಿಂದ 07/07/2011 ರವೆರೆಗೆ ಕರ ವಸೂಲಿಯಾದ ರೂ.1,06,000/- ಗಳ ಹಣವನ್ನು ಸ್ವೀಕರಿಸಿದ್ದು, ಸದರಿ ಮೊತ್ತವನ್ನು ದಿನಾಂಕ: 08/07/2011 ರಂದು ಬ್ಯಾಂಕಿನಲ್ಲಿ ಜಮಾ ಮಾಡಬೇಕಾಗಿರುತ್ತದೆ. ಆದರೆ, ಕಾರ್ಯದರ್ಶಿಯವರು ದಿನಾಂಕ: 08/07/2011 ರಂದು ರೂ. 49,000/- ಗಳನ್ನು ಮಾತ್ರ ಬ್ಯಾಂಕಿನಲ್ಲಿ ಜಮಾ ಮಾಡಿ, ಇನ್ನುಳಿದ ಮೊತ್ತವನ್ನು ಮುಂದಿನ ದಿನಗಳಲ್ಲಿ ಜಮಾ ಮಾಡಿರುವುದು ದಾಖಲೆಗಳಿಂದ ಕಂಡುಬಂದಿರುತ್ತದೆ. 2ನೇ ಎದುರುದಾರರಾದ-ಶ್ರೀ ಶಿವಕುಮಾರ್, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಕರ ವಸೂಲಿಯಾದ ಇನ್ನುಳಿದ ಮೊತ್ತವಾದ ರೂ. 51,600/- ಗಳನ್ನು ತಮ್ಮ ಬಳಿಯಲ್ಲಿ ಉಳಿಸಿಕೊಂಡು, ಮುಂದಿನ ದಿನಗಳಲ್ಲಿ ಜಮಾ ಮಾಡುವ ಪ್ರಕ್ರಿಯೆಯಿಂದ ಸದರಿಯವರು ಕರ್ತವ್ಯಲೋಪ ಎಸಗಿರುವುದು ಕಂಡುಬಂದಿರುತ್ತದೆ.

- 3ನೇ ಎದುರುದಾರರಾದ ಶ್ರೀ ವೀರಭದ್ರಪ್ಪ ಗಡದ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ರವರು ಸಹಾ ಫಲಾನುಭವಿಗಳ ಪಟ್ಟಿಯನ್ನು ಸಂಬಂಧಪಟ್ಟ ದಾಖಲಾತಿಗಳನ್ನ ದೃಢೀಕರಿಸಿದ ನಂತರವಷ್ಟೇ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸಲ್ಲಿಸಬೇಕಾಗಿದ್ದು ಇದರ ಬದಲಾಗಿ ಸದರಿಯವರು ದಾಖಲಾತಿಗಳನ್ನು ಪರಿಶೀಲಿಸದೇ ದೃಢೀಕರಿಸಿ ಮೇಲಾಧಿಕಾರಿಗಳಿಗೆ ಸಲ್ಲಿಸಿ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

14) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 2 ಮತ್ತು 3ನೇ ಎದುರುದಾರರು ಸಾರ್ವಜನಿಕ/ ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸಾರ್ವಜನಿಕ/ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

15) **ಸದರಿ 3ನೇ ಎದುರುದಾರರು 28/02/2015 ರಲ್ಲಿ ನಿವೃತ್ತಿ ಹೊಂದಿದ್ದು,** ಸದರಿ ಕರ್ತವ್ಯ ಲೋಪವು 2010–11ನೇ ಇಸ್ವಿಯ ಬಸವ ಇಂದಿರಾ ವಸತಿ ಯೋಜನೆಯ ಸಂಬಂಧವಾಗಿದ್ದು ಸದರಿ ಘಟನೆಯು 4 ವರ್ಷಕ್ಕಿಂತ ಹೆಚ್ಚು ಹಿಂದಿನದ್ದಾಗಿರುವ ಕಾರಣ 3ನೇ ಎದುರುದಾರರ ವಿರುದ್ಧ ಕೆ.ಸಿ.ಎಸ್.ಆರ್. 214 (2) (ಬಿ) (2) ರಡಿ ತನಿಖೆ ಕೈಗೊಳ್ಳಲು ಅವಕಾಶ ಇರುವುದಿಲ್ಲ. ಹಾಗಾಗಿ ಸದರಿಯವರ ವಿರುದ್ಧ ಪ್ರಕ್ರಿಯೆಯನ್ನು ಕೈಬಿಡಬಹುದಾಗಿರುತ್ತದೆ.

16) **1ನೇ ಎದುರುದಾರರ ವಿರುದ್ಧ ಯಾವುದೇ ಆರೋಪವು** ತನಿಖಾಧಿಕಾರಿಗಳ ವರದಿಯಲ್ಲಿ ಸಾಬೀತಾಗಿರದೇ ಇರುವ ಕಾರಣ ಅವರ ವಿರುದ್ಧ ಪ್ರಕ್ರಿಯೆಯನ್ನು ಕೈಬಿಡಬಹುದಾಗಿದೆ.

17) ದೂರುದಾರರ ದೂರು, ತನಿಖಾಧಿಕಾರಿಗಳ ತನಿಖಾ ವರದಿ ಹಾಗೂ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿ, 2ನೇ ಎದುರುದಾರರು/ಆಪಾದಿತ ಸರ್ಕಾರಿ ನೌಕರರು

ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪ್ರಾಮಾಣಿಕತೆ ಹಾಗೂ ನಿಷ್ಠೆ ಇಲ್ಲದೇ, ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

18) ಆದುದರಿಂದ, 2ನೇ ಎದುರುದಾರರು/ಆಪಾದಿತ ಸರ್ಕಾರಿ ನೌಕರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1)ರಲ್ಲಿ ಹೇಳಿದಂತೆ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, 2ನೇ ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತು,

ಅದರಂತೆ ಶಿಸ್ತು ಪ್ರಾಧಿಕಾರಿಯಾದ ಸಮಾಜ ಕಲ್ಯಾಣ ಇಲಾಖೆ ತಮ್ಮ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ ನಿಬಂಧಕರು (ವಿಚಾರಣೆಗಳು 10) ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. ಆದ್ದರಿಂದ ನಿಮ್ಮ ವಿರುದ್ಧ ಈ ಮೇಲ್ಕಂಡ **ಆಪಾದನೆ.**

4. ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ ಆಫ್ ಚಾರ್ಜ್) ಆ.ಸ.ನೌ ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು 19.12.2019 ರಂದು ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆಯನ್ನು ನಿಯಮ-11(9) ಕೆ.ಸಿ.ಎಸ್. ಸಿಸಿಎ ರೂಲ್ಸ್ 1957ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌ ರವರು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

5. ಆ.ಸ.ನೌ ರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6. ಆ.ಸ.ನೌ ರವರು ತಮ್ಮ ಲಿಖಿತ ರಕ್ಷಣಾ ಹೇಳಿಕೆಯನ್ನು ದಿನಾಂಕ 18.12.2019 ರಂದು ಸಲ್ಲಿಸಿ, ದೋಷಾರೋಪಣೆಯಲ್ಲಿ ಎರಡು ಆರೋಪಗಳನ್ನು ಮಾಡಿದ್ದು, (1) ತೆರಿಗೆ ಸಂಗರಹ ಹಣವನ್ನು ತಡವಾಗಿ ಜಮಾ ಮಾಡಲಾಗಿದೆ ಎಂದು ಮತ್ತು (2) ಮಗದಂಪುರ ಗ್ರಾಮದ 63 ಗುಡಿಸಲು ವಾಸಿಗಳ ಆಯ್ಕೆಯನ್ನು ನಿಯಮಾನುಸಾರ ಮಾಡಿಲ್ಲವೆಂದು ಆಪಾದಿಸಿದ್ದು, ತಾನು ದಿನಾಂಕ 05.04.2011 ರಿಂದ 07.07.2011ರವರೆಗೆ ಒಟ್ಟು ರೂ 1,06,000/–ವಸೂಲಿ ಆಗಿದ್ದು ಅದರಲ್ಲಿ ದಿನಾಂಕ 08.07.2011 ರಂದು ರೂ. 49,000/– ಹಾಗೂ ನಂತರದಲ್ಲಿ ರೂ. 51,600/– ಗಳನ್ನು ಬ್ಯಾಂಕಿಗೆ ಜಮಾ ಆಗಿರುತ್ತದೆ. ತೆರಿಗೆಯನ್ನು ವಸೂಲಿ ಮಾಡುವುದು ಹಾಗೂ ಅದನ್ನು ಬ್ಯಾಂಕಿಗೆ ಜಮಾ ಮಾಡುವುದು ಬಿಲ್ ಕಲೆಕ್ಟರ್ ಹಾಗೂ ಕಾರ್ಯದರ್ಶಿಗಳ ಕರ್ತವ್ಯವಾಗಿರುತ್ತದೆಂದು ಮತ್ತು 2ನೇ ಆಪಾದನೆಗೆ ಸಂಬಂಧಿಸಿದಂತೆ ಮಗದಂಪುರ ಗ್ರಾಮಕ್ಕೆ ಮಂಜೂರು ಆಗಿದ್ದ 63 ಗುಡಿಸಲುವಾಸಿಗಳ ಪಟ್ಟಿಯಲ್ಲಿ ಇರುವ ಫಲಾನುಭವಿಗಳ ಆಯ್ಕೆ ಹಾಗೂ ಮಂಜೂರಾತಿಗೆ ಸಂಬಂಧಪಟ್ಟಂತೆ ಗುಡಿಸಲು ವಾಸಿಗಳ ಸಮೀಕ್ಷೆ ನಡೆಸಿ ದಿನಾಂಕ 11.06.2010 ರೊಳಗಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ವೆಬ್‌ಸೈಟ್‌ನಲ್ಲಿ ನಮೂದಿಸಬೇಕೆಂದು ಮಾನ್ಯ ಪ್ರಧಾನ ವ್ಯವಸ್ಥಾಪಕರು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಬೆಂಗಳೂರು ಇವರುಎಲ್ಲಾ ಜಿಲ್ಲೆಯಾ ಅಧಿಕಾರಿಗಳಿಗೆ ಸೂಚಿಸಿರುವ ವಿಷಯ ತನಿಖಾ ವರದಿಯಲ್ಲಿ ಪ್ರಸ್ತಾಪ ಮಾಡಲಾಗಿದೆ, ಆದರೆ ತಾನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಅಧಿಕಾರ ವಹಿಸಿಕೊಳ್ಳುವುದಕ್ಕಿಂತ ಮೊದಲು ಅಂದರೆ ದಿನಾಂಕ 16.08.2010 ರ ಒಳಗಾಗಿ ಗುಡಿಸಲು ವಾಸಿಗಳ ಸಮೀಕ್ಷೆ ಕಾರ್ಯ ಮುಗಿದಿರುತ್ತದೆಂದು ರಕ್ಷಣಾ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

7. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ ಶ್ರೀ **ವೀರಭದ್ರಪ್ಪ**

ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು ನಿ.ಪಿ.–1 ರಿಂದ 4 ರವರೆಗೆ ಹಾಗೂ ಶ್ರೀ **ಗಣೇಶ್ ರಾವ್**, ಸಹಾಯಕ ಅಭಿಯಂತರರು, ತನಿಖಾಧಿಕಾರಿಯವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ. 5 ರಿಂದ 9 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ ರವರ ದ್ವಿತೀಯ ಮೌಖಿಕ ಹೇಳಿಕೆಯನ್ನು ದಿನಾಂಕ 19.02.2021 ರಂದು ಪಡೆದುಕೊಳ್ಳಲಾಗಿರುತ್ತದೆ.

8. ಆ.ಸ.ನೌ ಶ್ರೀ **ಶಿವಕುಮಾರ್** ರವರು ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ.–1** ಎಂದು ನಿ.ಡಿ. **1 ರಿಂದ ನಿ.ಡಿ. 6** ರವರೆಗೆ ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ.

9. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಮತ್ತು ಆ.ಸ.ನೌ ರವರ ಪರ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

10. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತು ಪಡಿಸಿದೆಯೇ?

**ಅಂಶ–2:** ಆದೇಶವೇನು?

11. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

12. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ಸಕರಾತ್ಮಕವಾಗಿ.**

**ಅಂಶ 2: ಅಂತಿಮ ಆದೇಶದಂತೆ**

<u>ಕಾರಣಗಳು:</u>

13. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ **ದೂರುದಾರರಾದ ಶ್ರೀ ವೀರಭದ್ರಪ್ಪ** ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು ನಿ.ಪಿ.–1 ರಿಂದ 4 ರವರೆಗೆ ಹಾಗೂ **ಶ್ರೀ ಗಣೇಶ್ ರಾವ್, ಸಹಾಯಕ ಅಭಿಯಂತರರು, ತನಿಖಾಧಿಕಾರಿಯವರನ್ನು** ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ. 5 ರಿಂದ 9 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ದೂರುದಾರರು ಸಲ್ಲಿಸಿರುವ ದೂರಿನ ಪ್ರಪತ್ರ ದಿನಾಂಕ 05.09.2011 ನ್ನು **ನಿ.ಪಿ–1** ಎಂದು, ದೂರಿನ ಪ್ರಪತ್ರ–2 ನ್ನು **ನಿ.ಪಿ–2** ಎಂದು, ದಿನಾಂಕ 05.09.2011 ರ ದೂರನ್ನು **ನಿ.ಪಿ–3** ಎಂದು ಹಾಗೂ ದೂರಿನೊಂದಿಗೆ ಸಲ್ಲಿಸಿರುವ ದಾಖಲಾತಿಗಳನ್ನು **ನಿ.ಪಿ–4** ಎಂದು ಗುರುತಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗತಳು ಫಸಮಲ್ ಗ್ರಾಪಂಚಾಯತಿಯಲ್ಲಿ ಪಂಚರ ಸಮಕ್ಷಮದಲ್ಲಿ ದಿನಾಂಕ 10.12.2013 ರಂದು ಮಾಡಿರುವ ಮಹಜರ್ **ನಿ.ಪಿ–5** ಎಂದು, ಸದರಿ ಗ್ರಾಮಪಂಚಾಯತಿಯ ದೂರಿಗೆ ಸಂಬಂಧಪಟ್ಟ ಫೋಟೋಗಳನ್ನು ನಿ.ಪಿ–6 ಎಂದು, ಸಿ.ಡಿ ಯನ್ನು ನಿ.ಪಿ–7 ಎಂದು ತನಿಖಾ ವರದಿಯನ್ನು ನಿ.ಪಿ–8 ಎಂದು ಹಾಗೂ ತನಿಖಾ ವರದಿಯ ಕಂಡಿಕೆ 54 ರಿಂದ 69 ರವರೆಗೆ ನಿ.ಪಿ–8(ಎ) ಎಂದು, ತನಿಖಾ ಕಾಲದಲ್ಲಿ ದೂರಿಗೆ ಸಂಬಂಧಪಟ್ಟಂತೆ ಪುಟ ಸಂಖ್ಯೆ 152 ರಿಂದ 209 ನ್ನು ನಿ.ಪಿ–9 ಎಂದು ಗುರುತಿಸಿಕೊಂಡಿರುತ್ತಾರೆ.

14. ಆ.ಸ.ನೌ ಶ್ರೀ **ಶಿವಕುಮಾರ್** ರವರು ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ.–1** ಎಂದು ನಿ.ಡಿ. **1** ರಿಂದ ನಿ.ಡಿ. **6** ರವರೆಗೆ ದಾಖಲೆಯನ್ನು ಗುರುತಿಸಿಕೊಂಡು ಸಾಕ್ಷ್ಯ ನುಡಿದಿರುತ್ತಾರೆ. ಪಂಚಾಯತಿಯ ನಡವಳಿಕೆ ಪುಸ್ತಕದ ದೃಢೀಕ್ರತ ಪ್ರತಿ **ನಿ.ಡಿ–1** ಎಂದು, ಫಲಾನುಭವಿಗಳ ಪಟ್ಟಿಯ ದೃಢೀಕೃತ ಪ್ರತಿ **ನಿ.ಡಿ–2** ಎಂದು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಯಮಿತ ರವರು ಜಿಲ್ಲಾಧಿಕಾರಿಗಳಿಗೆ ಮತ್ತು ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಬರೆದ ಪತ್ರ ದಿನಾಂಕ 09.06.2010ರ ದೃಢೀಕೃತ ಪ್ರತಿ **ನಿ.ಡಿ–3** ಎಂದು, ಆ.ಸ.ನೌ ರವರ ಸೇವಾದೃಢೀಕರಣ ಪತ್ರ

**ನಿ.ಡಿ–4** ಎಂದು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಯಮಿತ ರವರು ಜಿಲ್ಲಾಧಿಕಾರಿಗಳಿಗೆ ಮತ್ತು ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಬರೆದ ಪತ್ರ ದಿನಾಂಕ 29.06.2010 ರ ದೃಢೀಕೃತ ಪ್ರತಿ **ನಿ.ಡಿ–5** ಎಂದು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ದಿನಾಂಕ 15.03.2021 ರಂದು ಆ.ಸ.ನೌ ರವರಿಗೆ ನೀಡಿದ ಪತ್ರದ ದೃಢೀಕೃತ ಪ್ರತಿಯನ್ನು **ನಿ.ಡಿ–6** ಎಂದು ಗುರುತಿಸಿಕೊಂಡಿರುತ್ತಾರೆ.

15. ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ ಶ್ರೀ ವೀರಭದ್ರಪ್ಪ ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು ನಿ.ಪಿ.–1 ರಿಂದ 4 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

16. ಪಿಡಬ್ಲ್ಯೂ–1 ಶ್ರೀ ವೀರಭದ್ರಪ್ಪ, ದೂರುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತಾನು ಯಾದಗಿರಿ ಜಿಲ್ಲೆ ಮಗದಂಪುರ ಗ್ರಾಮದ ವಾಸಿಯಾಗಿದ್ದು, ಸದರಿ ಗ್ರಾಮವು ಪಸ್ಪೂಲ್ ಗ್ರಾಮ ಪಂಚಾಯತಿಗೆ ಒಳಪಡುವುದಾಗಿ, ಆಪಾದಿತ ಸರ್ಕಾರಿ ನೌಕರರು ತಮ್ಮ ಗ್ರಾಮದ ಪಿಡಿಒ ಆಗಿದ್ದರೆಂದು, 2011ನೇ ಸಾಲಿನಲ್ಲಿ ತಮ್ಮ ಗ್ರಾಮ ಪಂಚಾಯತಿಗೆ ಇಂದಿರಾ ಬಸವ ಯೋಜನೆಯಡಿ ಮನೆಗಳ ಹಂಚಿಕೆ ಅನುದಾನ ಮಂಜೂರಾಗಿದ್ದು, ಸದರಿ ಯೋಜನೆಯಡಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಗ್ರಾಮ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಸಂಬಂಧಿಕರಿಗೆ ಹೆಚ್ಚಿಗೆ ಮನೆ ಹಂಚಿಕೆ ಮಾಡಿದ್ದು, ಬಡ ಜನರಿಗೆ ಮನೆಗಳನ್ನು ಹಂಚಿಕೆ ಮಾಡಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

17. ಪಿಡಬ್ಲ್ಯೂ–1 ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಹೆಣ್ಣು ಫಲಾನುಭವಿಗಳ ಆಯ್ಕೆಯಲ್ಲಿ ಕುಟುಂಬದಲ್ಲಿ ಗಂಡು ಮಕ್ಕಳ ಹೆಸರನ್ನು ಹೆಣ್ಣು ಮಕ್ಕಳ ಹೆಸರಾಗಿ ತೋರಿಸಿ ನೊಂದಣಿ ಮಾಡಿಸಿರುತ್ತಾರೆಂದು ಉದಾಹರಣೆಗೆ ಕುಟುಂಬದಲ್ಲಿನ ಹೆಣ್ಣು ಮಗುವಿನ ಹೆಸರು ದೊಡ್ಡಮ್ಮ ಎಂದು ಇದ್ದರೆ ದೊಡ್ಡಪ್ಪ ಎಂದು ನೊಂದಣಿ ಮಾಡಿರುತ್ತಾರೆಂದು, ಈ ವಿಚಾರವನ್ನು ಆಪಾದಿತ ಸರ್ಕಾರಿ ನೌಕರನ ಗಮನಕ್ಕೆ ತಂದಿದ್ದಾಗಿ, ತಾನು ಸದರಿ ಯೋಜನೆಯಡಿ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲವೆಂದು, ಸದರಿ ಪಿಡಿಒ

ಮತ್ತು ಸಿಇಓ ಇತರೆ ಅಧಿಕಾರಿಗಳಿಗೆ ದೂರು ಸಲ್ಲಿಸಿದ್ದರು ಯಾವುದೇ ಕ್ರಮಕೈಗೊಳ್ಳದಿದ್ದಾಗ ತಾನು ಲೋಕಾಯುಕ್ತಕ್ಕೆ ದೂರು ಸಲ್ಲಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ.

18. ಪಿಡಬ್ಲ್ಯೂ-1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಅಧಿಕಾರಿಗಳು ಯಾವುದೇ ಕ್ರಮಕೈಗೊಳ್ಳದಿದ್ದಾಗ ತಾನು ಸದರಿ ದೂರನ್ನು ನಿ.ಪಿ-1 ರಿಂದ ನಿ.ಪಿ-3 ಹಾಗೂ ದೂರಿನೊಂದಿಗೆ ತಾನು ಸಲ್ಲಿಸಿದ ದಾಖಲೆಗಳನ್ನು (8 ಪುಟ) ನಿ.ಪಿ-4 ಎಂದು ಗುರುತಿಸಿಕೊಂಡಿರುವುದಾಗಿ ನುಡಿದಿರುತ್ತಾರೆ.

19. ಪಿಡಬ್ಲ್ಯೂ-2 ಶ್ರೀ ಗಣೇಶ್ ರಾವ್, ಸಹಾಯಕ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು (ತನಿಖಾಧಿಕಾರಿ) ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತಾನು 2008ರಿಂದ 2016ರವರೆಗೆ ಕರ್ನಾಟಕ ಲೋಕಾಯುಕ್ತದ ತಾಂತ್ರಿಕ ವಿಭಾಗದಲ್ಲಿ ಸಹಾಯಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸಿದ್ದು, ದಿ:10-12-2013ರಂದು ಬೆಳಿಗ್ಗೆ ಫಸ್‌ಪುಲ್ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ದೂರುದಾರರ ಸಮಕ್ಷಮದಲ್ಲಿ ತನಿಖೆ ಪ್ರಾರಂಭಿಸಿ ದೂರಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಪರಿಶೀಲಿಸಲಾಗಿ ಡಿಜಿಓ ಮತ್ತು ವೀರಭದ್ರಪ್ಪ ಗಡದ ಇವರುಗಳು ಫಸಪುಲ್ ಗ್ರಾಮ ಪಂಚಾಯತಿ 2010-11ನೆ ಸಾಲಿನ ಬಸವ ಇಂದಿರಾ ಯೋಜನೆಯಡಿಯಲ್ಲಿ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಪರಿಶೀಲಿಸಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಟರಾವು ಹೊರಡಿಸಿರುವುದನ್ನು ಮತ್ತು ದಾಖಲೀಕರಣ ಪ್ರಕ್ರಿಯೆಯ ಪೂರ್ಣಗೊಳಿಸಿರುವ ಬಗ್ಗೆ ಹಾಗೂ ಫಲಾನುಭವಿಗಳ ವಿವರಗಳನ್ನು ಪರಿಶೀಲಿಸಿ ದೃಢೀಕರಿಸಿ, ತದನಂತರ ಸಲ್ಲಿಸಬೇಕಾಗಿದ್ದು, **ಸದರಿ ಪ್ರಕ್ರಿಯೆಯನ್ನು ಸರ್ಕಾರದ ನಿಯಮಾನುಸಾರ ಪಾಲಿಸದೇ ಮೇಲಾಧಿಕಾರಿಗಳಿಗೆ ಸಲ್ಲಿಸಿ ಕರ್ತವ್ಯ ಲೋಪ ಎಸಗಿರುತ್ತಾರೆಂದು** ಸಾಕ್ಷ್ಯ ನುಡಿದಿರುತ್ತಾರೆ.

20. ಪಿಡಬ್ಲ್ಯೂ-2 ತನಿಖಾಧಿಕಾರಿಯವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, 2011-12ನೇ ಸಾಲಿನ ಕರ ವಸೂಲಿಯನ್ನು ದಿ:05-04-2011ರಿಂದ 07-07-2011ರವರೆಗೆ ಕರ ವಸೂಲಿಯಾದ ರೂ.1,06,000/-ಗಳ ಹಣವನ್ನು ಸ್ವೀಕರಿಸಿದ್ದು, ಸದರಿ ಮೊತ್ತದಲ್ಲಿ ದಿ:08-07-2011ರಂದು ರೂ.49,000/- ಮೊತ್ತಗಳನ್ನು ಮಾತ್ರ ಬ್ಯಾಂಕಿಗೆ ಜಮಾ ಮಾಡಿ ಉಳಿದ ಮೊತ್ತವನ್ನು ತಮ್ಮ ಬಳಿ ಉಳಿಸಿಕೊಂಡು ಮುಂದಿನ ದಿನಗಳಲ್ಲಿ ಜಮಾ ಮಾಡಿ ಕರ್ತವ್ಯ ಲೋಪ ಎಸಗಿರುತ್ತಾರೆಂದು, ತಾನು ಸಲ್ಲಿಸಿದ ತನಿಖಾವರದಿಯನ್ನು

ನಿ.ಪಿ-5 ಎಂದು ಗುರುತಿಸಿಕೊಂಡಿರುತ್ತಾರೆ. ಗ್ರಾಮ ಪಂಚಾಯತಿಯಲ್ಲಿ ದೂರಿಗೆ ಸಂಬಂಧಪಟ್ಟ ಫೋಟೋಗಳನ್ನು ಮತ್ತು ವಿಡಿಯೋ ಮಾಡಿದ್ದು, ಸದರಿ ಫೋಟೋಗಳನ್ನು ನಿಪಿ-6 ಎಂದು, ಸಿ.ಡಿ.ಯನ್ನು ನಿಪಿ-7 ಎಂದು ಗುರುತಿಸಲಾಗಿರುತ್ತದೆ. ತನಿಖಾ ವರದಿಯನ್ನು ನಿಪಿ-8ಎಂದು, (ಕಂಡಿಕೆ 54-69ರವರೆಗೆ) ತನಿಖಾಧಿಕಾರಿಯ್ನ ಸಹಿಯನ್ನು ನಿಪಿ-8ಎ ಎಂದು ಗುರುತಿಸಿಕೊಂಡಿರುತ್ತಾರೆ.

21. ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ತನಿಖಾ ಕಾಲದಲ್ಲಿ ದೂರಿಗೆ ಸಂಬಂಧಪಟ್ಟಂತೆ ಪುಟ ಸಂಖ್ಯೆ: 152ರಿಂದ 209ರವರೆಗೆ ಪಡೆದುಕೊಂಡಿದ್ದು ಅದನ್ನು ನಿಪಿ-9 (ಪು.ಸಂ.152-209)ಎಂದು ಗುರುತಿಸಿಕೊಂಡಿರುತ್ತಾರೆ ಹಾಗೂ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿದ ಸಂಬಂಧ ಅನುಮೋದಿತ ಪಟ್ಟಿ ಬಿಟ್ಟರೆ ಬೇರೆ ಯಾವುದೇ ದಾಖಲೆಗಳು ಇರಲಿಲ್ಲವೆಂದು ಮತ್ತು ಗ್ರಾಮ ಪಂಚಾಯಿತಿಯಿಂದಾದ ಠರಾವು ಸಹ ಇರಲಿಲ್ಲವೆಂದು ಆ ಸಮಯದಲ್ಲಿ ಎದುರುದಾರರು ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ.

(i) 1ನೇ ಆರೋಪಣೆಯಾದ ಯಾದಗಿರಿ ತಾಲ್ಲೂಕಿನ ಪಸ್ಪೂಲ್ ಗ್ರಾಮಪಂಚಾಯ್ತಿಯಲ್ಲ 2010-11ನೇ ಸಾಲಿನ ಬಸವ ಇಂದಿರಾ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಅನುಸರಿಸಲಾದ ಕ್ರಮಗಳ ಬಗ್ಗೆ ಯಾವುದೇ ದಾಖಲಾತಿಗಳು ಗ್ರಾಮಪಂಚಾಯ್ತಿ ಕಛೇರಿಯಲ್ಲಿ ಲಭ್ಯವಿಲ್ಲ. ವಸತಿಯೋಜನೆಯ ಅನುಷ್ಠಾನದ ಬಗ್ಗೆ ನೀಡಲಾಗಿರುವ ಮಾರ್ಗಸೂಚಿಯು ಪ್ರಕಾರ ಅರ್ಜಿದಾರ ಫಲಾನುಭವಿಗಳ ಪಟ್ಟಿಯನ್ನು ಗ್ರಾಮ ಸಭೆಯಲ್ಲಿ ಮಂಡಿಸಿ, ಗ್ರಾಮಸ್ತರು ಹಾಗೂ ಗ್ರಾಮ ಪಂಚಾಯಿತಿಯ ಸದಸ್ಯರುಗಳು ಒಪ್ಪಿಗೆ ನೀಡಿದ ನಂತರ, ಗ್ರಾಮಪಂಚಾಯ್ತಿಯ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಠರಾವು ಹೊರಡಿಸಿದ ನಂತರವೇ ಸದರಿ ಫಲಾನುಭವಿಗಳ ಪಟ್ಟಿಯನ್ನು ಅನುಮೋದನೆಗಾಗಿ ಮಂಡಿಸುವ ಬಗ್ಗೆ ಮಾರ್ಗಸೂಚಿ ಇರುತ್ತದೆ. ದಿನಾಂಕ: 26/03/2011 ರಂದು ನಡೆದ ಸಾಮಾನ್ಯ ಸಭೆಯ ಪ್ರೊಸಿಡಿಂಗ್ಸ್ ಪುಸ್ತಕದಲ್ಲಿ, 63 ಫಲಾನುಭವಿಗಳ ಹೆಸರುಗಳನ್ನು ನಮೂದಿಸಿ, ಅವರನ್ನು ಫಲಾನುಭವಿಗಳು ಎಂದು ಆಯ್ಕೆ ಮಾಡಿ ಸಭೆಯಲ್ಲಿ ಮಂಡಿಸಿ ದೃಢೀಕರಿಸಲಾಗಿದೆ. ಆದರೆ, ಸದರಿ ನಡವಳಿ ಪುಸ್ತಕದಲ್ಲಿ ಸಭೆಗೆ ಹಾಜರಾದ ಗ್ರಾಮಸ್ಥರ ಹಾಗೂ ಸದಸ್ಯರ ಸಹಿಯಾಗಲೀ ಸಾಮಾನ್ಯ ಸಭೆಯ ಠರಾವು ಆಗಲೀ ಲಭ್ಯವಿಲ್ಲ ಹಾಗೂ ಅರ್ಹ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಲ್ಲಿ ಯಾವ ರೀತಿಯ ಕ್ರಮ ಅನುಸರಿಸಲಾಗಿದೆ, ಹಾಗೂ ಮಾರ್ಗಸೂಚಿ ಅನ್ವಯ ಅಯ್ಕೆ ಮಾಡಲಾಗಿದೇ ಎಂಬ ಬಗ್ಗೆ ಯಾವುದೇ ದಾಖಲೆಗಳು ಲಭ್ಯವಿಲ್ಲ. ಅರ್ಹ ಫಲಾನುಭವಿಗಳನ್ನು ಗುರುತಿಸಿ, ಆಯ್ಕೆ ಮಾಡಿರುವ ಬಗ್ಗೆ ಯಾವುದೇ ದಾಖಲೆಗಳು ಇಲ್ಲದೆ ಹಾಗೂ ಸರ್ಕಾರದ ನಿಯಮಗಳನ್ನು ಹಾಗೂ ಯೋಜನೆಯ ಮಾರ್ಗಸೂಚಿಯನ್ನು ಉಲ್ಲಂಘಿಸಿ ಸದರಿ ಫಲಾನುಭವಿಗಳ ಪಟ್ಟಿಯನ್ನು ತಯಾರಿಸಿ ಅನುಮೋದನೆಗಾಗಿ ಮೇಲಾಧಿಕಾರಿಗಳಿಗೆ ಸಲ್ಲಿಸಿದ್ದು, ಅಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಮಾರ್ಗಸೂಚಿಯನ್ನು ಅನುಸರಿಸದೆ ಕರ್ತವ್ಯ ಲೋಪ ಎಸಗಿರುತ್ತೀರಿ.

22. ಪ್ರಾ.ಸಾ-1 ಮತ್ತು 2 ರವರ ಸಾಕ್ಷ್ಯ ಹಾಗೂ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿರುತ್ತೇನೆ. ದೂರುದಾರರು ತಮ್ಮ ದೂರಿನಲ್ಲಿ 2011ನೇ ಸಾಲಿನಲ್ಲಿ ಗ್ರಾಮಪಂಚಾಯತಿಗೆ ಬಸವ ಇಂದಿರಾ ಯೋಜನೆಯಡಿಯಲ್ಲಿ ಮನೆಗಳ ಹಂಚಿಕೆಗೆ ಅನುದಾನ ಮಂಜೂರಾಗಿದ್ದು ಸದರಿ ಯೋಜನಯಡಿಯಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಗ್ರಾಮಪಂಚಾಯತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸಂಬಂಧಿಕರಿಗೆ ಹೆಚ್ಚು ಮನೆಗಳನ್ನು ಹಂಚಿಕೆ ಮಾಡಿದ್ದು ಬಡ ಜನರಿಗೆ ಮನೆಗಳನ್ನು ಹಂಚಿಕೆ ಮಾಡಿರುವುದಿಲ್ಲ. ಹೆಣ್ಣು ಫಲಾನುಭವಿಗಳ ಆಯ್ಕೆಯಲ್ಲಿ ಕುಟುಂಬದ ಗಂಡುಮಕ್ಕಳ ಹೆಸರನ್ನು ಹೆಣ್ಣ ಮಕ್ಕಳ ಹೆಸರಿಗೆ ತೋರಿಸಿ ನೋಂದಾವಣಿ ಮಾಡಿರುತ್ತಾರೆ.

23. ತನಿಖಾಧಿಕಾರಿಗಳು ಪ್ರಾ.ಸಾ-2 ರವರು 10.12.2013 ರಂದು ಪುಸ್ವಲ್ ಪಂಚಾಯತಿಗೆ ಭೇಟಿ ಕೊಟ್ಟು ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ ಡಿಜಿಓ ರವರು ಪಸ್ವಲ್ ಗ್ರಾಮಪಂಚಾಯತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದು, 2010-11 ನೇ ಸಾಲಿನಲ್ಲಿ ಬಸವ ಇಂದಿರಾ ಯೋಜನೆಯಡಿಯಲ್ಲಿ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಪರಿಶೀಲಿಸಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಠರಾವು ಹೊರಡಿಸಿರುವುದನ್ನು ಮತ್ತು ದಾಖಲೀಕರಣ ಪ್ರಕ್ರೀಯೇ ಪೂರ್ಣಗೊಳಿಸಿರುವ ಬಗ್ಗೆ ಹಾಗೂ ಫಲಾನುಭವಿಗಳ ವಿವರಗಳನ್ನು ಪರಿಶೀಲಿಸಿ ದೃಢೀಕರಿಸಿ ತದನಂತರ ಸಲ್ಲಿಸಬೇಕಾಗಿದ್ದು, ಸದರಿ ಪ್ರಕ್ರೀಯೆಯನ್ನು ಸರ್ಕಾರದ ನಿಯಮಗಳನ್ನು ಪಾಲಿಸದೆ ಮೇಲಾಧಿಕಾರಿಗಳಿಗೆ ಸಲ್ಲಿಸಿ ಕರ್ತವ್ಯಲೋಪವೆಸಗಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಮಹಜರ್ ಮಾಡಿದ್ದು ಸದರಿ ಮಹಜರ್ ನಿ.ಪಿ-5 ಎಂದು ಅ ಸಮಯದಲ್ಲಿ ಫೋಟೋ ಮತ್ತು ವಿಡಿಯೋ ಮಾಡಿದ್ದು ಅವುಗಳನ್ನು ನಿ.ಪಿ-6 ಮತ್ತು 7 ಎಂದು ಗುರುತಿಸಿರುತ್ತಾರೆ. ತಮ್ಮ ವರದಿಯನ್ನು ನಿ.ಪಿ-9 ಎಂದು ಗುರುತಿಸಿರುತ್ತಾರೆ. ಸದರಿ ನಿ.ಪಿ-9 ರಲ್ಲಿ ಪುಟಸಂಖ್ಯೆ 28 ಪ್ಯಾರ 68 ರಲ್ಲಿ ಶ್ರೀ ಶಿವಕುಮಾರ್ ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು, ಪಸ್ಪೂಲ್ ಗ್ರಾಮ ಪಂಚಾಯ್ತಿ ರವರು 2010-11 ನೇ ಸಾಲಿನ ಬಸವ ಇಂದಿರಾ ಯೋಜನೆಯಡಿಯಲ್ಲಿ, ಅರ್ಹ ಫಲಾನುಭವಿಗಳ ಪಟ್ಟಿಯನ್ನು ಸರ್ಕಾರದ ನಿಯಮಾನುಸಾರ ಮಾಡದೇ, ಮೇಲಾಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸದೆ ನಿಯಮಗಳನ್ನು ಗಾಳಿಗೆ ತೂರಿ 2010-11 ನೇ ಸಾಲಿನ ಬಸವ ಇಂದಿರಾ ಯೋಜನೆಯಡಿಯಲ್ಲಿ ಗ್ರಾಮಪಂಚಾಯತಿ ಅಧ್ಯಕ್ಷರ ಕುಟುಂಬದ ಸದಸ್ಯರುಗಳಿಗೆ 4 ಮನೆಗಳನ್ನು ಮಾಡಿರುತ್ತಾರೆ ಶ್ರೀಮತಿ ರಾಧ ಎಂಬುವರು ತಾಲ್ಲೂಕು ಪಂಚಾಯತಿ ಸದಸ್ಯರಾಗಿದ್ದು ಆಕೆಗೆ ಮತ್ತು ಆಕೆಯ ನೆಗಣಿ ರವರಿಗೆ 2 ಮನೆಗಳನ್ನು ಮಂಜೂರು ಮಾಡಿರುತ್ತಾರೆ. ಶ್ರೀಮತಿ ತಿಪ್ಪಮ್ಮ ಎಂಬುವರು

ತಾಳೆಗೆರೆ ಗ್ರಾಮದ ವಾಸಿಯಾಗಿದ್ದು ಆಕೆಯ ಹೆಸರಿಗೆ ಅಕ್ರಮವಾಗಿ ಮನೆಯನ್ನು ಮಂಜೂರು ಮಾಡಿರುತ್ತಾರೆ. ಮನೆಗಳನ್ನು ಮಂಜೂರು ಮಾಡುವ ಪೂರ್ವದಲ್ಲಿ ಗ್ರಾಮಸಭೆ ಕರೆದು ಫಲಾನುಭವಿಗಳ ವಿವರಗಳನ್ನು ಪರಿಶೀಲಿಸಿ ಅದನ್ನು ದೃಢೀಕರಿಸಿ ಸರ್ಕಾರದ ನಿಯಮಾನುಸಾರ ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾಗುತ್ತದೆ. ಆದರೆ, ಆಪಾದಿತ ಸರ್ಕಾರಿ ನೌಕರರು ಗ್ರಾಮಸಭೆ ಕರೆಯದೆ, ಫಲಾನುಭವಿಗಳ ವಿವರಗಳನ್ನು ಪರಿಶೀಲಿಸದೆ ಅದನ್ನು ದೃಢೀಕರಿಸದೆ ಸರ್ಕಾರದ ನಿಯಮಾನುಸಾರ ಫಲಾನುಭವಿಗಳನ್ನು ಆಯ್ಕೆ ಮಾಡದೆ ಕತವ್ಯಲೋಪವೆಸಗಿರುವುದು ಸಾಬೀತಾಗಿರುತ್ತದೆ.

24. (ii)ನೇ ಅರೋಪವಾದ ಆಪಾದಿತ ಸರ್ಕಾರಿ ನೌಕರರಾದ ನೀವು 2011-12 ನೇ ಸಾಲಿನಲ್ಲಿ ದಿನಾಂಕ: 05/04/2011 ರಿಂದ 07/07/2011 ರವರೆಗೆ ಕರ ವಸೂಲಿ ಬಾಬ್ತು ರೂ.1,06,000/- ಗಳ ಹಣವನ್ನು ವಸೂಲು ಮಾಡಿದ್ದು, ಸದರಿ ಮೊತ್ತವನ್ನು ದಿನಾಂಕ: 08/07/2011 ರಂದು ಬ್ಯಾಂಕಿನಲ್ಲಿ ಜಮಾ ಮಾಡಬೇಕಾಗಿರುತ್ತದೆ. ಆದರೆ, ನೀವು ದಿನಾಂಕ: 08/07/2011 ರಂದು ಕೇವಲ ರೂ. 49,000/- ಗಳನ್ನು ಮಾತ್ರ ಬ್ಯಾಂಕಿನ ಗ್ರಾಮಪಂಚಾಯ್ತಿಗೆ ಖಾತೆಗೆ ಜಮಾ ಮಾಡಿ, ಉಳಿದ ಮೊತ್ತವನ್ನು ಮುಂದಿನ ದಿನಗಳಲ್ಲಿ ಜಮಾ ಮಾಡಿರುವುದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ನೀವು ಕರ ವಸೂಲಿಯಾದ ಇನ್ನುಳಿದ ಮೊತ್ತವಾದ ರೂ. 51,600/- ಗಳನ್ನು ಬ್ಯಾಂಕಿನ ಖಾತೆಗೆ ಜಮಾ ಮಾಡದೇ ನಿಮ್ಮ ಬಳಿಯೇ ಉಳಿಸಿಕೊಂಡು, ತಾತ್ಕಲಿಕ ದುರುಪಯೋಗಪಡಿಸಿಕೊಂಡಿರುತ್ತೀರಿ ಹಾಗೂ ಸರ್ಕಾರಿ ಕೆಲಸ ನಿರ್ವಹಿಸುವಲ್ಲಿ, ಕರ್ತವ್ಯಲೋಪ ಎಸಗಿರುತ್ತೀರಿ ಹಾಗೂ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು. 1966 ರ ನಿಯಮ 3 (i) ರಿಂದ (iii) ರಲ್ಲಿ ಹೇಳಿರುವಂತೆ ದುರ್ನಡತೆಯೆಸಗಿರುತ್ತೀರಿ"

25. ಈ ಬಗ್ಗೆ ಪ್ರಾ.ಸಾ-2 ರವರ ತನಿಖಾ ವರದಿಯಿಂದ ಆಪಾದಿತ ಸರ್ಕಾರಿ ನೌಕರರು ಕರ ವಸೂಲಿ ರೂ. 1.06,000/- ಮಾಡಿ ಸದರಿ ಮೊತ್ತದಲ್ಲಿ ದಿನಾಂಕ 08.07.2011 ರಂದು ರೂ. 49,000/- ಜಮಾ ಮಾಡಿ ಉಳಿದ ಮೊತ್ತವನ್ನು ತಡವಾಗಿ ಮುಂದಿನ ದಿನಗಳಲ್ಲಿ ಜಮಾ ಮಾಡಿರುವುದು ತಮ್ಮ ತನಿಖಾ ವರದಿಯಲ್ಲಿ ನಮೂದಿಸಿರುತ್ತಾರೆ.

26. ಪ್ರಾ.ಸಾ-2 ರವರ ಮುಖ್ಯ ವಿಚಾರಣೆಯಲ್ಲಿ, 2011-12 ನೇ ಸಾಲಿನ ಕರ ವಸೂಲಿಯನ್ನು ದಿನಾಂಕ 05.04.2011 ರಿಂದ 07.07.2011 ರವರೆಗೆ ಕರವಸೂಲಿಯಾದ ರೂ. 1,06,000/-ಗಳ ಹಣವನ್ನು ಸ್ವೀಕರಿಸಿದ್ದು, ಸದರಿ ಮೊತ್ತದಲ್ಲಿ ದಿನಾಂಕ 08.07.2011 ರಂದು ರೂ. 49,000/-ಮೊತ್ತಗಳನ್ನು ಮಾತ್ರ ಬ್ಯಾಂಕಿಗೆ ಜಮಾ ಮಾಡಿ ಉಳಿದ ಮೊತ್ತವನ್ನು ತಮ್ಮ ಬಳಿ ಉಳಿಸಿಕೊಂಡು ಕರ್ತವ್ಯಲೋಪವೆಸಗಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ.

27. ಆಪಾದಿತ ಸರ್ಕಾರಿ ನೌಕರನು ತೆರಿಗೆ ಹಣವನ್ನು ಸರ್ಕಾರಿ ಖಾತೆಗೆ ಜಮಾ ಮಾಡಬೇಕಾಗಿರುತ್ತದೆ, ಆದರೆ ರೂ. 1,06,000/- ರೂ. 49,000/- ಮಾತ್ರ ಜಮಾ ಮಾಡಿ ಉಳಿದ ಹಣವನ್ನು ಬ್ಯಾಂಕಿಗೆ ಜಮಾ ಮಾಡದೆ ತಮ್ಮ ಬಳಿ ಇಟ್ಟುಕೊಂಡು ಕರ್ತವ್ಯಲೋಪವೆಸಗಿರುವುದು ಸಾಕ್ಷ್ಯಗಳಿಂದ ರುಜುವಾತಾಗಿರುತ್ತದೆ. ಯಾದಗಿರಿ ತಾಲ್ಲೂಕಿನ ಪಸ್ಪೂಲ್ ಗ್ರಾಮಪಂಚಾಯಿತ್ತಿಯಲ್ಲಿ 2010-11ನೇ ಸಾಲಿನ ಬಸವ ಇಂದಿರಾ ವಸತಿ ಯೋಜನೆಯಡಿಯಲ್ಲಿ ಅರ್ಹ ಫಲಾನುಭವಿಗಳನ್ನು ಗುರುತಿಸಿ, ಆಯ್ಕೆ ಮಾಡದೆ ಸರ್ಕಾರದ ನಿಯಮಗಳನ್ನು ಹಾಗೂ ಯೋಜನೆಯ ಮಾರ್ಗ ಸೂಚಿಯನ್ನು ಉಲ್ಲಂಘಿಸಿ ಸದರಿ ಫಲಾನುಭವಿಗಳ ಪಟ್ಟಿಯನ್ನು ತಯಾರಿಸಿ ಅನುಮೋದನೆಗಾಗಿ ಮೇಲಾಧಿಕಾರಿಗಳಿಗೆ ಸಲ್ಲಿಸಿ ಆಯ್ಕೆ ಪ್ರಕ್ರೀಯೆಯಲ್ಲಿ ಯಾವುದೇ ಮಾರ್ಗಸೂಚಿಯನ್ನು ಅನುಸರಿಸದೆ ಹಾಗೂ ಕರ ವಸೂಲಿಯಾದ ರೂ. 1,06,000/-ಗಳ ಹಣವನ್ನು ವಸೂಲಿ ಮಾಡಿದ್ದು, ಸದರಿ ಮೊತ್ತವನ್ನು ದಿನಾಂಕ 08.07.2011 ರಂದು ಬ್ಯಾಂಕಿನಲ್ಲಿ ಜಮಾ ಮಾಡಬೇಕಾಗಿದ್ದು, ನೀವು ದಿನಾಂಕ 08/07/2011ಟ ರಂದು ಕೇವಲ ರೂ. 49,000/-ಗಳನ್ನು ಮಾತ್ರ ಬ್ಯಾಂಕಿನ ಗ್ರಾಮಪಂಚಾಯ್ತಿ ಖಾತೆಗೆ ಜಮಾ ಮಾಡಿ ಉಳಿದ ಮೊತ್ತವನ್ನು ನಿಮ್ಮಲ್ಲಿಯೇ ಉಳಿಸಿಕೊಂಡು ತಾತ್ಕಲಿಕ ದುರುಪಯೋಗಪಡಿಸಿಕೊಂಡಿರುತ್ತೀರಿ ಹಾಗೂ ಸರ್ಕಾರಿ ಕೆಲಸ ನಿರ್ವಹಿಸುವಲ್ಲಿ ಕರ್ತವ್ಯಲೋಪವೆಸಗಿರುತ್ತೀರಿ ಹಾಗೂ ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3) (i) ರಿಂದ (iii) ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದನ್ನು ಸಕ್ಷಮ ಪ್ರಾಧಿಕಾರವು ಸಾಬೀತುಗೊಳಿಸಿರುತ್ತದೆ.

**ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ವಿಚಾರಣಾ ವರದಿ ಸಲ್ಲಿಸಲಾಗಿದೆ.**

**: ವಿಚಾರಣಾ ವರದಿ :**

ಶಿಸ್ತು ಪ್ರಾಧಿಕಾರದವು ಆ.ಸ.ನೌ ಆಪಾದಿತ ಸರ್ಕಾರಿ ನೌಕರ **ಶ್ರೀ ಶಿವಕುಮಾರ್,** ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಪಸೂರು ಗ್ರಾಮ ಪಂಚಾಯತಿ, ಯಾದಗಿರಿ ಜಿಲ್ಲೆ. ಹಾಲಿ ಪ್ರಾಂಶುಪಾಲರು, ಕಿತ್ತೂರು ರಾಣಿ ಚೆನ್ನಮ್ಮ ಮೊರಾರ್ಜಿ ದೇಸಾಯಿ ಶಾಲೆ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆರವರ ವಿರುದ್ಧದ

ದೋಷಾರೋಪಣೆಯಲ್ಲಿ ಮಾಡಲಾದ 2 (i) ಮತ್ತು (ii) ರವರೆಗಿನ ಆಪಾದನೆಗಳನ್ನು ರುಜುವಾತು ಪಡಿಸುವಲ್ಲಿ ಸಫಲರಾಗಿರುತ್ತಾರೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ-2 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**30ನೇ ಅಕ್ಟೋಬರ್ 2021**

(ಜೆ. ನಂಜುಂಡಯ್ಯ)
ಅಪರ ನಿಬಂಧಕರು ವಿಚಾರಣೆಗಳು-10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# INDEX

| | |
|---|---|
| **LIST OF WITNESS EXAMINED ON BEHALF OF DISCIPLINARY AUTHORITY :** | |
| PW-1 : Sri. Veerbhadrappa (Complainant) (original) | |
| PW-2 : Sri. Ganesh Rao, Assistant Engineer, Karnataka Lokayukta, Bengaluru (I.O) (Original) | |
| **LIST OF WITNESS EXAMINED ON BEHALF OF DEFENSE :** | |
| DW-1 : Sri. Shivakumar (DGO)-(original) | |
| **LIST OF EXHIBITS MARKED ON BEHALF OF DISCIPLINARY AUTHORITY:** | |
| Ex.P.1 : | Form No. I (Complaint) dated 05.09.2011 (original) |
| Ex.P.2 : | Form No.II (Affidavit) dated 05/09/2011- (original) |
| Ex.P.3 : | Complaint of the complainant dated 05/09/2011 (original) |
| Ex.P.4 : | Enclosures enclosed to the complaint (xcrox) |
| Ex.P.5 : | Mahazar dated 10/12/2013 by I.O. (Original) |
| Ex.P.6 : | Photos during mahazar pertains complaint (Original) |
| Ex.P.7 : | C.D. (Original) |
| Ex.P.8 : | Report of I.O. (Para 54-69) dated 28/03/2015 (Original) |
| Ex.P.9 | During investigation by I.O. from page No. 152 to 209 (Original 130 xcrox 131 to 187) |

| **LIST OF EXHIBITS MARKED ON BEHALF OF DEFENSE:** | |
|---|---|
| Ex.D-1 : | Certified copy of resolutions of the panchayath book (Certified Xerox copies ) |
| Ex.D-2 : | Certified copy of the beneficiaries list (Xerox 200 & 201 Certified Xerox copy) (Certified Xerox copies ) |
| Ex.D-3 : | Certified copy of the letter dated 09.06.2010 of Rajeevgandhi Rural Housing Scheme written to Deputy Commissioners and Chief Executive Officers (Certified Xerox Copy ) |
| Ex.D-4 : | Service Certificate of DGO dated 10.09.2020 (Original) |
| Ex.D-5: | Certified copy of the letter dated 29.06.2010 of Rajeevgandhi Rural Housing Scheme written to Deputy Commissioners and Chief Executive Officers (Certified Xerox Copy ) |
| Ex.D-6: | Letter of PDO dated 15.03.2021 given to DGO (Original) |

Date of Retirement of DGO is **30.06.2044**

30/10/21

**(G. NANJUNDAIAH)**
Additional Registrar (Enquiries)-10
Karnataka Lokayukta,
Bengaluru.

**GOVERNMENT OF KARNATAKA**

**KARNATAKA LOKAYUKTA**

No.UPLOK-1/DE/231/2019/ARE-10

Multi Storied Building,
Dr. B.R. Ambedkar Veedhi,
Bengaluru-560 001
Date: **02/11/2021**

**RECOMMENDATION**

Sub:- Departmental inquiry against;
Sri Shivakumar M, the then Panchayath Development Officer, Paspul Grama Panchayath, Yadgir District (Presently working as Principal, Kittur Rani Chennamma Morarji Desai School, Shirahatti Taluk, Gadag District) – Reg.

Ref:- 1) Govt. Order No.ಸಕಇ 111 ಮೊದೇಶಾ 2017, Bengaluru dated 12/6/2017.

2) Nomination order No.UPLOK-1/DE/231/2019, Bengaluru dated 25/9/2019 of Upalokayukta-1, State of Karnataka, Bengaluru

3) Inquiry Report dated 30/10/2021 of Additional Registrar of Enquiries-10, Karnataka Lokayukta, Bengaluru

----

The Government by its order dated 25/9/2019 initiated the disciplinary proceedings against Sri Shivakumar M, the then Panchayath Development Officer, Paspul Grama Panchayath, Yadgir District (Presently working as Principal, Kittur Rani Chennamma Morarji Desai School, Shirahatti Taluk, Gadag District) (hereinafter referred to as Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No.UPLOK-1/DE/231/2019 Bengaluru dated 25/9/2019 nominated Additional Registrar of Enquiries-10, Karnataka Lokayukta, Bengaluru, as the Inquiry Officer to frame charges and to conduct Departmental Inquiry

against DGO for the alleged charge of misconduct, said to have been committed by him.

3. The DGO Sri Shivakumar M, the then Panchayath Development Officer, Paspul Grama Panchayath, Yadgir District (Presently working as Principal, Kittur Rani Chennamma Morarji Desai School, Shirahatti Taluk, Gadag District) was tried for the following charge:-

"ಆಪಾದಿತ ಸರ್ಕಾರಿ ನೌಕರರಾದ ಶ್ರೀ. ಶಿವಕುಮಾರ್, ಆದ ನೀವು ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಪಸ್ಪೂಲ್ ಗ್ರಾಮ ಪಂಚಾಯತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ನಿಮ್ಮ ಸೇವಾ ಅವಧಿಯಲ್ಲಿ ಇಂದಿರಾ-ಬಸವ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ಈ ಕೆಳಗೆ ನಮೂದಿಸಿದಂತೆ ಅವ್ಯವಹಾರಗಳನ್ನು ಎಸಗಿ ಕರ್ತವ್ಯಲೋಪ ಎಸಗಿರುತ್ತೀರಿ, ಅವುಗಳ ವಿವರ ಈ ಕೆಳಕಂಡಂತೆ ಇರುತ್ತದೆ.

(i) ಯಾದಗಿರಿ ತಾಲ್ಲೂಕಿನ ಪಸ್ಪೂಲ್ ಗ್ರಾಮಪಂಚಾಯ್ತಿಯಲ್ಲಿ 2010-11ನೇ ಸಾಲಿನ ಬಸವ ಇಂದಿರಾ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಅನುಸರಿಸಲಾದ ಕ್ರಮಗಳ ಬಗ್ಗೆ ಯಾವುದೇ ದಾಖಲಾತಿಗಳು ಗ್ರಾಮಪಂಚಾಯ್ತಿ ಕಛೇರಿಯಲ್ಲಿ ಲಭ್ಯವಿಲ್ಲ. ವಸತಿಯೋಜನೆಯ ಅನುಷ್ಠಾನದ ಬಗ್ಗೆ ನೀಡಲಾಗಿರುವ ಮಾರ್ಗಸೂಚಿಯು ಪ್ರಕಾರ ಅರ್ಜಿದಾರ ಫಲಾನುಭವಿಗಳ ಪಟ್ಟಿಯನ್ನು ಗ್ರಾಮ ಸಭೆಯಲ್ಲಿ ಮಂಡಿಸಿ, ಗ್ರಾಮಸ್ಥರು ಹಾಗೂ ಗ್ರಾಮ ಪಂಚಾಯಿತಿಯ ಸದಸ್ಯರುಗಳು ಒಪ್ಪಿಗೆ ನೀಡಿದ ನಂತರ, ಗ್ರಾಮಪಂಚಾಯ್ತಿಯ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಠರಾವು ಹೊರಡಿಸಿದ ನಂತರವೇ ಸದರಿ ಫಲಾನುಭವಿಗಳ ಪಟ್ಟಿಯನ್ನು ಅನುಮೋದನೆಗಾಗಿ ಮಂಡಿಸುವ ಬಗ್ಗೆ ಮಾರ್ಗಸೂಚಿ ಇರುತ್ತದೆ. ದಿನಾಂಕ: 26/03/2011 ರಂದು ನಡೆದ ಸಾಮಾನ್ಯ ಸಭೆಯ ಪ್ರೊಸಿಡಿಂಗ್ಸ್ ಪುಸ್ತಕದಲ್ಲಿ, 63 ಫಲಾನುಭವಿಗಳ ಹೆಸರುಗಳನ್ನು ನಮೂದಿಸಿ, ಅವರನ್ನು ಫಲಾನುಭವಿಗಳು ಎಂದು ಆಯ್ಕೆ ಮಾಡಿ ಸಭೆಯಲ್ಲಿ ಮಂಡಿಸಿ ದೃಢೀಕರಿಸಲಾಗಿದೆ. ಆದರೆ, ಸದರಿ ನಡವಳಿ ಪುಸ್ತಕದಲ್ಲಿ ಸಭೆಗೆ ಹಾಜರಾದ ಗ್ರಾಮಸ್ಥರ ಹಾಗೂ ಸದಸ್ಯರ ಸಹಿಯಾಗಲೀ ಸಾಮಾನ್ಯ ಸಭೆಯ ಠರಾವು ಆಗಲೀ ಲಭ್ಯವಿಲ್ಲ ಹಾಗೂ ಅರ್ಹ ಫಲಾನುಭವಿಗಳ ಆಯ್ಕೆ

ಪ್ರಕ್ರಿಯೆಯಲ್ಲಿ ಯಾವ ರೀತಿಯ ಕ್ರಮ ಅನುಸರಿಸಲಾಗಿದೆ, ಹಾಗೂ ಮಾರ್ಗಸೂಚಿ ಅನ್ವಯ ಅಯ್ಕೆ ಮಾಡಲಾಗಿದೇ ಎಂಬ ಬಗ್ಗೆ ಯಾವುದೇ ದಾಖಲೆಗಳು ಲಭ್ಯವಿಲ್ಲ. ಅರ್ಹ ಫಲಾನುಭವಿಗಳನ್ನು ಗುರುತಿಸಿ, ಆಯ್ಕೆ ಮಾಡಿರುವ ಬಗ್ಗೆ ಯಾವುದೇ ದಾಖಲೆಗಳು ಇಲ್ಲದೆ ಹಾಗೂ ಸರ್ಕಾರದ ನಿಯಮಗಳನ್ನು ಹಾಗೂ ಯೋಜನೆಯ ಮಾರ್ಗಸೂಚಿಯನ್ನು ಉಲ್ಲಂಘಿಸಿ ಸದರಿ ಫಲಾನುಭವಿಗಳ ಪಟ್ಟಿಯನ್ನು ತಯಾರಿಸಿ ಅನುಮೋದನೆಗಾಗಿ ಮೇಲಾಧಿಕಾರಿಗಳಿಗೆ ಸಲ್ಲಿಸಿದ್ದು, ಅಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಮಾರ್ಗಸೂಚಿಯನ್ನು ಅನುಸರಿಸದೆ ಕರ್ತವ್ಯ ಲೋಪ ಎಸಗಿರುತ್ತೀರಿ.

(ii) ಹಾಗೂ ಆಪಾದಿತ ಸರ್ಕಾರಿ ನೌಕರರಾದ ನೀವು 2011-12 ನೇ ಸಾಲಿನಲ್ಲಿ ದಿನಾಂಕ: 05/04/2011 ರಿಂದ 07/07/2011 ರವರೆಗೆ ಕರ ವಸೂಲಿ ಬಾಬ್ತು ರೂ.1,06,000/- ಗಳ ಹಣವನ್ನು ವಸೂಲು ಮಾಡಿದ್ದು, ಸದರಿ ಮೊತ್ತವನ್ನು ದಿನಾಂಕ: 08/07/2011 ರಂದು ಬ್ಯಾಂಕಿನಲ್ಲಿ ಜಮಾ ಮಾಡಬೇಕಾಗಿರುತ್ತದೆ. ಆದರೆ, ನೀವು ದಿನಾಂಕ: 08/07/2011 ರಂದು ಕೇವಲ ರೂ. 49,000/- ಗಳನ್ನು ಮಾತ್ರ ಬ್ಯಾಂಕಿನ ಗ್ರಾಮಪಂಚಾಯ್ತಿಗೆ ಖಾತೆಗೆ ಜಮಾ ಮಾಡಿ, ಉಳಿದ ಮೊತ್ತವನ್ನು ಮುಂದಿನ ದಿನಗಳಲ್ಲಿ ಜಮಾ ಮಾಡಿರುವುದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ನೀವು ಕರ ವಸೂಲಿಯಾದ ಇನ್ನುಳಿದ ಮೊತ್ತವಾದ ರೂ. 51,600/- ಗಳನ್ನು ಬ್ಯಾಂಕಿನ ಖಾತೆಗೆ ಜಮಾ ಮಾಡದೇ ನಿಮ್ಮ ಬಳಿಯೇ ಉಳಿಸಿಕೊಂಡು,ತಾತ್ಕಾಲಿಕ ದುರುಪಯೋಗಪಡಿಸಿಕೊಂಡಿರುತ್ತೀರಿ ಹಾಗೂ ಸರ್ಕಾರಿ ಕೆಲಸ ನಿರ್ವಹಿಸುವಲ್ಲಿ, ಕರ್ತವ್ಯಲೋಪ ಎಸಗಿರುತ್ತೀರಿ ಹಾಗೂ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 ರ ನಿಯಮ 3 (i) ರಿಂದ (iii) ರಲ್ಲಿ ಹೇಳಿರುವಂತೆ ದುರ್ನಡತೆಯೆಸಗಿರುತ್ತೀರಿ"

4. The Inquiry Officer (Additional Registrar of Enquiries-10) on proper appreciation of oral and documentary evidence has held that the Disciplinary Authority has proved the above charges against DGO Sri Shivakumar M, the then Panchayath Development Officer, Paspul Grama Panchayath, Yadgir District (Presently working as Principal, Kittur Rani Chennamma Morarji Desai School, Shirahatti Taluk, Gadag District).

5. On re-consideration of inquiry report and taking note of the totality of the circumstances of the case, I do not find any reason to interfere with the findings recorded by the Inquiry Officer. It is hereby recommended to the Government to accept the report of Inquiry Officer.

6. As per the First Oral Statement submitted by DGO, he is due to retire from service on 30/6/2044.

7. Having regard to the nature of charge proved against DGO Sri Shivakumar M, the then Panchayath Development Officer, Paspul Grama Panchayath, Yadgir District (Presently working as Principal, Kittur Rani Chennamma Morarji Desai School, Shirahatti Taluk, Gadag District), it is hereby recommended to the Government for imposing penalty of withholding four annual increments payable to DGO Sri Shivakumar M with cumulative effect.

8. Action taken in the matter shall be intimated to this Authority.

Connected records are enclosed herewith.

2/11/21

**(JUSTICE B.S.PATIL)**
Upalokayukta,
State of Karnataka,
Bengaluru